# ಮನುವಿಕಾಸ

MANUVIKASA

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾಪತ್ರ

ಖಾಸಗಿ ಪ್ರಚಾರಕ್ಕಾಗಿ ಮಾತ್ರ

ಸಂಪಾದಕರು: ಗಣಪತಿ ಭಟ್ಟ

EdelGive Foundation
An Edelweiss Initiative

ಸಂಪಾದಕೀಯ ಮಂಡಳಿ: ಶುಭಾ ಪೈ, ಗಣಪತಿ ಹೆಗಡೆ, ಗಣೇಶ ಹೆಗಡೆ

ಸಂಚಿಕೆ: 6 ಸಂಪುಟ: 9





## ಗ್ರಾಮೀಣ ಉದ್ಯಮದಲ್ಲಿ ಮಹಿಳಾ ನಾಯಕತ್ವಕ್ಕೆ ಸಂದ ಗೌರವ: ಉಪ್ಪುಂದ ರೈತ ಉತ್ಪಾದಕ ಸಂಘಕ್ಕೆ ಹೆಮ್ಮೆಯ ಕ್ಷಣ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ, ಮತ್ಸ್ಯಸಿರಿ ಮಹಿಳಾ ಮೀನು ಮಾರಾಟಗಾರರ ಮತ್ತು ಮತ್ಸ್ಯೋದ್ಯಮ ಸಂಘ ಉಪ್ಪುಂದಕ್ಕೆ, ನಬಾರ್ಡ್ ಬೆಂಗಳೂರು ಪ್ರಾದೇಶಿಕ ಕಚೇರಿಯಲ್ಲಿ ಅದರ ವಿಶಿಷ್ಟ ಸಾಧನೆಗಾಗಿ ಗೌರವ ದೊರಕಿದೆ. ಈ ಪ್ರಶಸ್ತಿ ಕೇವಲ ಒಂದು ಗೌರವವಲ್ಲ, ಗ್ರಾಮೀಣ ಮಟ್ಟದಲ್ಲಿ ಮಹಿಳೆಯರು ಒಗ್ಗೂಡಿ ಸಾಧಿಸಿರುವ ಶಕ್ತಿಯ ಪ್ರತೀಕವಾಗಿದೆ.

ಈ ಯಶಸ್ಸಿನ ಹಿನ್ನಲೆಯಲ್ಲಿ ಆಡಳಿತ ಮಂಡಳಿಯ ಸದಸ್ಯೆಯರಾದ ಶ್ರೀಮತಿ ಚಂದ್ರಾವತಿ ಖಾರ್ವಿ ಮತ್ತು ಶ್ರೀಮತಿ ಮೋಹಿನಿ ಖಾರ್ವಿ ಅವರನ್ನು ದಿನಾಂಕ 10/03/2026ರಂದು ಗೌರವಿಸಲಾಯಿತು. ಈ ಕ್ಷಣವು ಮಹಿಳೆಯರ ಧೈರ್ಯ, ದೃಢನಿಶ್ಚಯ ಮತ್ತು ಒಗ್ಗಟ್ಟಿನ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಮನುವಿಕಾಸ ಮತ್ತು ನಬಾರ್ಡ್ ಅವರ ಪ್ರೋತ್ಸಾಹದಲ್ಲಿ ಸ್ಥಾಪಿತವಾದ ಈ ರೈತ ಉತ್ಪಾದಕ ಸಂಘವು, ಮೀನುಗಾರಿಕಾ ಸಂಬಂಧಿತ ವಸ್ತುಗಳು ಮತ್ತು ಕಿರಾಣಿ ವ್ಯಾಪಾರದಲ್ಲಿ ಮಹತ್ವದ ಸಾಧನೆ ಮಾಡಿದೆ. ಸಣ್ಣ ಪ್ರಯತ್ನವಾಗಿ ಆರಂಭವಾದ ಈ ಸಂಘಟನೆ ಇಂದು ಸ್ಥಿರ ಜೀವನೋಪಾಯವನ್ನು ನಿರ್ಮಿಸಿ, ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಗೆ ದಾರಿ ತೋರಿಸಿದೆ.

ಈ ಸಾಧನೆ ಕೇವಲ ಒಂದು ಮೈಲಿಗಲ್ಲಲ್ಲ, ಸರಿಯಾದ ಬೆಂಬಲ ಮತ್ತು ಅವಕಾಶಗಳನ್ನು ನೀಡಿದಾಗ ಮಹಿಳೆಯರು ಸಮುದಾಯದ ಪರಿವರ್ತನೆಗೆ ಹೇಗೆ ಕಾರಣರಾಗಬಹುದು ಎಂಬುದಕ್ಕೆ ಇದು ಪ್ರಬಲ ಉದಾಹರಣೆ.

ಈ ಹೆಮ್ಮೆಯ ಕ್ಷಣವನ್ನು ಆಚರಿಸುತ್ತಾ, ಇನ್ನಷ್ಟು ಮಹಿಳೆಯರು ಮುಂದೆ ಬಂದು, ದೊಡ್ಡ ಕನಸು ಕಾಣಲಿ ಮತ್ತು ತಮ್ಮ ಸಮುದಾಯವನ್ನು ಅಭಿವೃದ್ಧಿಪಡಿಸುವ ಉದ್ಯಮಗಳನ್ನು ನಿರ್ಮಿಸಲಿ ಎಂಬುದು ನಮ್ಮ ಆಶಯ.

ಇನ್ನಷ್ಟು ಪ್ರೇರಣಾದಾಯಕ ಕಥೆಗಳಿಗಾಗಿ, ಮಹಿಳಾ ಶಕ್ತಿ ಸದಾ ಬೆಳಗಲಿ!

# ಸಂಪಾದಕೀಯ



**ಆತ್ಮೀಯ ಓದುಗರೇ...**

ಪ್ರಸಕ್ತ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಗಿವ್ ಟು ಗೇನ್' ಧ್ಯೇಯ ವಾಕ್ಯದ ಅಡಿಯಲ್ಲಿ ಆಚರಿಸಲಾಗಿದೆ. ಜಾಗತಿಕವಾಗಿ ಅವಲೋಕಿಸಿದಾಗ, ಅಭಿವೃದ್ಧಿಶೀಲ ಭಾರತದಂತಹ ದೇಶದಲ್ಲಿ, ಪುರುಷ ಸಮಾನವಾಗಿ ಮಹಿಳೆ ಇಂದು ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸಿದ್ದಾಳೆ, ಅಂತರಾಷ್ಟ್ರೀಯ ಮಟ್ಟದಿಂದ ಹಿಡಿದು ಗ್ರಾಮೀಣ ಪ್ರದೇಶಗಳವರೆಗೆ ಮಿತಿಯಿಲ್ಲದಷ್ಟು ಮಹಿಳಾ ಸಾಧಕರು ನಮ್ಮಲ್ಲಿ ಇದ್ದಾರೆ. ಅಂತಹ ಹಲವು ಗ್ರಾಮೀಣ ಸ್ವ-ಉದ್ಯಮಶೀಲ ಮಹಿಳೆಯರಿಗೆ ಈ ಸಂಚಿಕೆಯನ್ನು ಅರ್ಪಿಸುತ್ತಿದ್ದೇವೆ.

ಕ್ರಿಯೆಯನ್ನು ಶಬ್ದಗಳಲ್ಲಿ ಸೆರೆಹಿಡಿದು ಸುಲಲಿತವಾಗಿ ಅರ್ಥವಾಗುವಂತೆ ಜನಸಾಮಾನ್ಯರಿಗೆ ತಲುಪಿಸಿದಾಗ ಮಾತ್ರ ಅಲ್ಲಿ ಇನ್ನೊಂದು ಅಭಿವೃದ್ಧಿಯ ಕಥೆ ಹುಟ್ಟಿಕೊಳ್ಳುತ್ತದೆ. ಹಾಗಾಗಿ ಈ ಸಂಚಿಕೆಯನ್ನು ತಾವುಗಳು ಅಭಿವೃದ್ಧಿ ಕಥೆಗಳ ಸಂಕಲನ ಅಂತಲೂ ಅಂದುಕೊಳ್ಳಬಹುದು. ಮನುವಿಕಾಸ ಸಂಸ್ಥೆ ಕಳೆದ 23 ವರ್ಷಗಳಿಂದ ಹತ್ತಾರು ಸಮಾಜಮುಖಿ ರಂಗಗಳಲ್ಲಿ ಅವಿರತವಾಗಿ ಕಾರ್ಯಪ್ರವೃತ್ತವಾಗಿದೆ. ಈಡಲ್‌ಗಿವ್ ಫೌಂಡೇಶನ್‌ನ ಸಹಯೋಗದೊಂದಿಗೆ ಕಳೆದ ಒಂಭತ್ತು ವರ್ಷಗಳಿಂದ ಗ್ರಾಮೀಣ ಮಹಿಳೆಯರ ಅಭ್ಯುದಯಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಯನ್ನು ಪಡೆದು ಸ್ವ-ಉದ್ಯಮಶೀಲರಾಗಿ, ಇತರರಿಗೆ ಮಾದರಿಯಾಗಿರುವ ಆಯ್ದ ಹಲವು ಮಹಿಳೆಯರ ಜೀವನದ ಯಶೋಗಾಥೆಯ ಮಜಲುಗಳನ್ನು ತಮ್ಮ ಮುಂದಿಟ್ಟಿದ್ದೇವೆ. ಜೊತೆಗೆ ಮತ್ಸ್ಯಸಿರಿ ಮಹಿಳಾ ಮೀನು ಮಾರಾಟಗಾರರ ಮತ್ತು ಮತ್ಸ್ಯೋದ್ಯಮ ಸಂಘ ಉಪ್ಪುಂದ ಎಫ್‌ಪಿಒಗೆ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ, ನಬಾರ್ಡ್ ಬೆಂಗಳೂರು ಪ್ರಾದೇಶಿಕ ಕಚೇರಿಯಲ್ಲಿ ಅದರ ಸಾಧನೆಗಾಗಿ ಗೌರವ ದೊರಕಿದೆ. ಈ ಸಾಧನೆ ಮಹಿಳಾ ಶಕ್ತಿ, ಒಗ್ಗಟ್ಟು ಮತ್ತು ಗ್ರಾಮೀಣ ಉದ್ಯಮದ ಯಶಸ್ಸಿನ ಪ್ರೇರಣಾದಾಯಕ ಉದಾಹರಣೆ.

ನಮ್ಮಲ್ಲಿ 'ಅಭಿವೃದ್ಧಿ' ಎಂಬ ಪದ ಬದಲಾಗುತ್ತಿರುವ ಜಗತ್ತು ಮತ್ತು ನಾವು ಅಳವಡಿಸಿಕೊಳ್ಳುವ ಜೀವನಶೈಲಿಯ ಆಧಾರದ ಮೇಲೆ ಬದಲಾವಣೆಯಾಗುತ್ತಲೇ ಇರುತ್ತದೆ. ಅಳವಡಿಕೆ ಅನಿವಾರ್ಯವಾದರೂ ಸಹ ಪರ್ಯಾಯ ಮಾರ್ಗಗಳು ಸಹ ಪಾರಂಪರಿಕವಾಗಿ ನಮ್ಮಲ್ಲಿ ಅಡಕವಾಗಿವೆ. ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆಯಿಂದ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡ ನಿರ್ಮಾಣ ಮೊದಲಾದ ಮಾರ್ಗಗಳು ಈಗಲೂ ಪ್ರಮುಖವಾಗಿವೆ. ಈಗಾಗಲೇ ಸಂಸ್ಥೆ ಹಲವು ದಾನಿ ಸಂಸ್ಥೆಗಳ ಸಹಯೋಗದೊಂದಿಗೆ 337 ಕೆರೆಗಳನ್ನು ಮತ್ತು 3800ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿಗೊಳಿಸಿದೆ. ಆ ಕುರಿತಾದ ವಿಸ್ತೃತ ಮಾಹಿತಿ ಸಂಚಿಕೆಯಲ್ಲಿ ಅಡಕವಾಗಿದೆ.

ಹವಾಮಾನದ ವೈಪರಿತ್ಯ ಮತ್ತು ಜಾಗತಿಕ ತಾಪಮಾನದ ಏರಿಕೆಯಿಂದಾಗಿ ಕೃಷಿ ಮತ್ತು ಅರಣ್ಯ ಉತ್ಪನ್ನಗಳ ಮೇಲೆ ಉಂಟಾಗುತ್ತಿರುವ ಗಂಭೀರ ಪರಿಣಾಮಗಳನ್ನು ಅರಿತು 'ಇಂಗಾಲ-ತಟಸ್ಥ ಗ್ರಾಮಗಳು ಮತ್ತು ಪ್ರಕೃತಿ ಆಧಾರಿತ ಪರಿಹಾರಗಳ ಉಪಕ್ರಮಗಳು ಮತ್ತು ಅನುಷ್ಠಾನ ಚೌಕಟ್ಟು' (Carbon-Neutral Villages and Nature-Based Solutions Initiatives and Implementation Framework) ಬಗೆಗಿನ ಉಪಕ್ರಮಗಳು ಮತ್ತು ಪರಿಹಾರೋಪಾಯಗಳ ಬಗೆಗಿನ ಮಾಹಿತಿಯನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.

ನಾವೀಗ 2025-26 ಆರ್ಥಿಕ ವರ್ಷದ ಕೊನೆಯ ಭಾಗಕ್ಕೆ ಬಂದು ತಲುಪಿದ್ದೇವೆ. ಸಂಸ್ಥೆಯ ಕಾರ್ಯವ್ಯಾಪ್ತಿ ಮತ್ತು ಹೊಸ ಯೋಜನೆಗಳ ಅನುಷ್ಠಾನಕ್ಕೆ ಈ ವರ್ಷ ಅತ್ಯಂತ ಮಹತ್ವದ್ದಾಗಿದೆ. ಕಾಲ ಕಾಲಕ್ಕೆ ಸಂಸ್ಥೆಗೆ ಹೊಸ ಯೋಜನೆಗಳನ್ನು ತರಲು ಕ್ರಿಯಾ ಯೋಜನೆಯನ್ನು ಹಾಕಿಕೊಟ್ಟ ನಿರ್ದೇಶಕ ಮತ್ತು ಸಲಹಾ ಮಂಡಳಿಯ ಸದಸ್ಯರಿಗೆ, ಸಂಸ್ಥೆಯ ಏಳಿಗೆಗೆ ಹಗಲಿರುಳು ಶ್ರಮಿಸಿ ಅವಿರತವಾಗಿ ದುಡಿದ ನನ್ನ ನೆಚ್ಚಿನ ಸಹೋದ್ಯೋಗಿಗಳಿಗೆ ಈ ಮೂಲಕ ಧನ್ಯವಾದಗಳನ್ನು ಹೇಳುತ್ತಿದ್ದೇವೆ. 'ಬೆಳಕಿಲ್ಲದ ಹಾದಿಯಲ್ಲಿ ನಡೆಯಬಹುದು ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯಲಾಗದು ಎನ್ನುವ ಮಾತಿನಂತೆ ನಾವೆಲ್ಲರೂ ನಾಳೆಯ 'ಸುಸ್ಥಿರ ಅಭಿವೃದ್ಧಿ' ಎನ್ನುವ ಒಳ್ಳೆಯ ಕನಸುಗಳಿಗಾಗಿ ನಡೆಯೋಣ ಎನ್ನುವ ಆಶಯದೊಂದಿಗೆ...

ಧನ್ಯವಾದಗಳೊಂದಿಗೆ

ಗಣಪತಿ ಭಟ್ಟ
ನಿರ್ದೇಶಕರು
ಮನುವಿಕಾಸ

# ಬದುಕಿಗೆ ಆಧಾರವಾದ ಟೀ ಅಂಗಡಿ



ಮುಂಡಗೋಡ ತಾಲೂಕು ನಂದಿಕಟ್ಟ ಗ್ರಾಮದ ಶ್ರೀಮತಿ ಗಿರಿಜಾ ಭೂರಹಿತ ಕುಟುಂಬಕ್ಕೆ ಸೇರಿದವರು. ಮನೆಯಲ್ಲಿ ಗಂಡ-ಹೆಂಡತಿ ಮತ್ತು ಒಬ್ಬಳೇ ಮಗಳು. ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು. 4ನೇ ತರಗತಿ ಓದಿರುವ ಗಿರಿಜಾ, ಮನುವಿಕಾಸ ಸಂಸ್ಥೆಯ ಶ್ರೀ ಗಣೇಶ ಸ್ವಸಹಾಯ ಸಂಘದಲ್ಲಿ ಸದಸ್ಯರಾಗಿದ್ದಾರೆ. ಸಂಘದಿಂದ 20 ಸಾವಿರ ರೂ. ಸಾಲ ಪಡೆದು ಒಂದು ಆಕಳು ಖರೀದಿಸಿ ಹೈನುಗಾರಿಕೆ ಶುರುಮಾಡಿದರು. ಗಂಡ ಯಥಾರೀತಿ ಕೂಲಿ ಕೆಲಸ ಮಾಡುತ್ತಿದ್ದರು.

ಈ ನಡುವೆ ಮಗಳಿಗೆ ಮದುವೆಯಾಗಿ ಅವರು ಗಂಡನ ಮನೆಗೆ ಹೋದರು. ಈಗ ಗಂಡ-ಹೆಂಡತಿ ಇಬ್ಬರೇ. ಹೈನುಗಾರಿಕೆ ಮತ್ತು ಕೂಲಿಯಿಂದ ಬರುವ ಆದಾಯ ಇವರ ಜೀವನ ನಿರ್ವಹಣೆಗೆ ಸಾಕಾಗುತ್ತಿತ್ತು. ಜೊತೆಗೆ ಸಂಘದ ಸಾಲ ಮರುಪಾವತಿಯನ್ನೂ ಮಾಡುತ್ತಿದ್ದರು.

“ನನ್ನ ಬದುಕಿನಲ್ಲಿ ಒಂದು ದುರಂತ ನಡೆದುಹೋಯಿತು. ಒಂದು ಅಪಘಾತದಲ್ಲಿ ನನ್ನ ಗಂಡ ತನ್ನ ಕೈ ಕಳೆದುಕೊಂಡರು. ನಮ್ಮ ಕುಟುಂಬಕ್ಕೆ ಇದೊಂದು ದೊಡ್ಡ ಆಘಾತ. ಗಂಡನನ್ನು ನೋಡಿಕೊಳ್ಳಲು ಸಮಯ ಸಾಕಾಗದೆ ಆಕಳನ್ನು ನನ್ನ ಅಮ್ಮನಿಗೆ ಕೊಟ್ಟೆವು. ಕೆಲವು ತಿಂಗಳಲ್ಲಿ ಗಂಡನ ಆರೋಗ್ಯ ಸ್ವಲ್ಪ ಸುಧಾರಿಸಿತು. ಆದರೆ ಎಲ್ಲೂ ಕೆಲಸ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಜೀವನ ನಿರ್ವಹಣೆ ತುಂಬಾ ಕಷ್ಟವಾಗತೊಡಗಿತು. ಆಗ ಮನುವಿಕಾಸ ಸಂಸ್ಥೆಯ ಮಾರ್ಗದರ್ಶನ ಹಾಗೂ ಸಂಘದಿಂದ ದೊರೆತ ಸಾಲದ ನೆರವಿನಿಂದ ನಾನು ಗ್ರಾಮದ ಪಕ್ಕದಲ್ಲೇ ಇರುವ ಟಿಬೆಟಿಯನ್ ಕಾಲೋನಿಯಲ್ಲಿ ಒಂದು ಟೀ ಅಂಗಡಿ ಶುರುಮಾಡಿದೆ ಇದಕ್ಕಾಗಿ ಸಂಘದಿಂದ 50000 ರೂ. ಸಾಲ ಪಡೆದೆ. ನಾನು ಟೀ ಅಂಗಡಿ ಶುರು ಮಾಡಿದ್ದು 2022ರಲ್ಲಿ.”

“ಮೊದಲಿಗೆ ಕೇವಲ ಟೀ-ಕಾಫಿ ಹಾಗೂ ಸಂಜೆ ಮಿರ್ಚಿ-ಮಂಡಕ್ಕಿ ಮಾತ್ರ ಮಾಡುತ್ತಿದ್ದೆ. ಆದರೆ ಗ್ರಾಹಕರು ತಿಂಡಿಗೆ ಬೇಡಿಕೆ ಇಡತೊಡಗಿದರು. ಕ್ರಮೇಣ ದೋಸೆ, ಇಡ್ಲಿಯನ್ನೂ ಮಾಡಲು ಶುರುಮಾಡಿದೆ. ಒಳ್ಳೆಯ ವ್ಯಾಪಾರ ನಡೆಯತೊಡಗಿತು. 200 ರೂ.ಗಳಿಂದ ಆರಂಭವಾದ ವ್ಯಾಪಾರ ಕೆಲವೇ ತಿಂಗಳಲ್ಲಿ ದಿನಕ್ಕೆ 1000 ರೂ.ಗಳಿಗೆ ತಲುಪಿತು. ತಿಂಗಳಿಗೆ 30000 ರೂ.ಗಳ ದುಡಿಮೆ. ಇದರಲ್ಲಿ ಅಂಗಡಿ ಬಾಡಿಗೆ ಹಾಗೂ ಇತರ ಖರ್ಚು ಕಳೆದು ಅಂದಾಜು 15000 ನಿವ್ವಳ ಲಾಭ ದೊರೆಯತೊಡಗಿತು. ಹಳ್ಳಿಯಲ್ಲಿ ಸ್ವಂತ ಮನೆ ಇದ್ದುದರಿಂದ ಈ ಮೊತ್ತ ಇವರ ಜೀವನ ನಿರ್ವಹಣೆಗೆ ಸಾಕಾಯಿತು”.

ತಮ್ಮ ದುಡಿಮೆ ಹಣದಲ್ಲಿ ಸಂಘದ ಸಾಲದ ಕಂತನ್ನು ತೀರಿಸುತ್ತಾ ಪ್ರತಿದಿನ 100 ರೂ. ಪಿಗ್ಮಿ ಕಟ್ಟುವ ಮೂಲಕ ಉಳಿತಾಯವನ್ನೂ ಮಾಡುತ್ತಿದ್ದಾರೆ. ಕಷ್ಟಗಳು ಬಂದಾಗ ಎದೆಗುಂದದೆ ಅವಕಾಶಗಳನ್ನು ಬಳಸಿಕೊಂಡರೆ ಜೀವನವನ್ನು ಸುಗಮಗೊಳಿಸಿಕೊಳ್ಳಬಹುದು ಎಂಬುದಕ್ಕೆ ಗಿರಿಜಾ ಉತ್ತಮ ಉದಾಹರಣೆ.

# ಸ್ವಾವಲಂಬನೆಯ ಸುವಾಸನೆ






ಶ್ರೀಮತಿ ಲಕ್ಷ್ಮಿ ಅವರ ಊರು ಮೂಲತಃ ಕುಂದಾಪುರ. 2006ರಲ್ಲಿ ಆರೆಕೊಪ್ಪಕ್ಕೆ ಮದುವೆಯಾಗಿ ಬಂದರು. ಗಂಡನ ಮನೆಯವರು ಭೂರಹಿತ ಕುಟುಂಬ. ಗಂಡ ಶಿರಸಿಯ ಅಂಗಡಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ದಿನನಿತ್ಯದ ಜೀವನ ನಿರ್ವಹಣೆಗೆ ಅವರ ದುಡಿಮೆ ಸಾಕಾಗುತ್ತಿತ್ತು. ಆದರೆ ಮಕ್ಕಳ ವಿದ್ಯಾಭ್ಯಾಸ, ಸ್ವಂತಕ್ಕೆ ಒಂದು ಮನೆ ಕಟ್ಟಿಕೊಳ್ಳುವ ಆಸೆಗೆ ಉಳಿತಾಯ ಮಾಡಲು ಸಾಧ್ಯವೇ ಇರಲಿಲ್ಲ.

ಲಕ್ಷ್ಮಿ 2014 ರಲ್ಲಿ ರೇಷ್ಮಾ ಮನುವಿಕಾಸ ಸ್ವ-ಸಹಾಯ ಸಂಘಕ್ಕೆ ಸೇರ್ಪಡೆಯಾದರು. ಮನುವಿಕಾಸ ಸಂಸ್ಥೆಯಿಂದ ವಿವಿಧ ಜೀವನೋಪಾಯ ಚಟುವಟಿಕೆಗಳ ಬಗ್ಗೆ ತರಬೇತಿ ಹಾಗೂ ಮಾಹಿತಿ ಲಭ್ಯವಾಯಿತು. ಕುಂದಾಪುರ ಮೂಲದ ಲಕ್ಷ್ಮಿ ಅವರಿಗೆ ಹೋಟೆಲ್ ಉದ್ಯಮ ನಿರ್ವಹಿಸಿ ಅನುಭವ ಇದ್ದುದರಿಂದ ಆರೆಕೊಪ್ಪದಲ್ಲಿ ಒಂದು ಹೋಟೆಲ್ ಆರಂಭಿಸಲು ಮುಂದಾದರು. ಮನೆಯವರ ಸಹಕಾರವೂ ದೊರೆಯಿತು.

ಆದರೆ ಬ್ಯಾಂಕುಗಳಿಂದ ಸಾಲ ಸೌಲಭ್ಯ ದೊರೆಯಲಿಲ್ಲ. ಕೊನೆಗೆ ಸ್ವ-ಸಹಾಯ ಸಂಘದಲ್ಲಿ 30000 ರೂ. ಆಂತರಿಕ ಸಾಲ ಪಡೆದು ಅದರ ಜೊತೆಗೆ ಒಡವೆಗಳನ್ನು ಅಡ ಇಟ್ಟು ಸ್ವಲ್ಪ ಮೊತ್ತ ಸೇರಿಸಿ 2014 ರಲ್ಲಿ ಮೀನಿನ ಊಟದ ಹೋಟೆಲ್ ಆರಂಭಿಸಿದರು. ಕೆಲವೇ ದಿನಗಳಲ್ಲಿ ಇವರ ಹೋಟೆಲ್ ಉತ್ತಮ ವಹಿವಾಟು ಮಾಡಲು ಆರಂಭಿಸಿತು. ಇಲ್ಲಿ ದೊರೆಯುವ ಮೀನಿನ ಊಟ, ರುಚಿ ಹಾಗೂ ಕೈಗೆಟಕುವ ದರದಲ್ಲಿ ಲಭ್ಯವಿದ್ದುದರಿಂದ ಗ್ರಾಹಕರು ಖಾಯಂ ಆಗಿ ಬರಲಾರಂಭಿಸಿದರು. ಕಟ್ಟಡ ಕಾರ್ಮಿಕರು ಹಾಗೂ ಲಾರಿ ಚಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಇವರ ಹೊಟೆಲಿಗೆ ಬರುತ್ತಿರುವುದು ವಿಶೇಷ.

“ನಮ್ಮ ಹೊಟೆಲ್ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಮಾತ್ರ ತೆರೆದಿರುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು 60 ಊಟ ಹಾಗೂ ಮಳೆಗಾಲದಲ್ಲಿ ಸುಮಾರು 20 ಊಟ ಮಾರಾಟವಾಗುತ್ತದೆ. ಪ್ರತಿ ಊಟಕ್ಕೆ ರೂ.80 ದರ ನಿಗದಿಪಡಿಸಿದ್ದು, ಬೇಸಿಗೆಯಲ್ಲಿ ಅಂದಾಜು 5000 ರೂ. ಹಾಗೂ ಮಳೆಗಾಲದಲ್ಲಿ ಅಂದಾಜು 1500 ಆದಾಯ ದೊರೆಯುತ್ತಿದೆ. ಅಂದರೆ ಬೇಸಿಗೆಯ 4 ತಿಂಗಳು ತಿಂಗಳಿಗೆ 1,50,000 ರೂ. ಮತ್ತು ಉಳಿದ 8 ತಿಂಗಳು ತಿಂಗಳಿಗೆ 45000 ರೂ. ವಹಿವಾಟು ಮಾಡುತ್ತೇವೆ. ಒಟ್ಟಾರೆ ವಾರ್ಷಿಕ 9,60,000 ರೂ.ಗಳ ವಹಿವಾಟು ಆಗುತ್ತದೆ. ಇದರಲ್ಲಿ ಶೇ 60 ರಷ್ಟು ಖರ್ಚು ತೆಗೆದರೆ ಸುಮಾರು 4,50,000 ರೂ. ಇವರ ವಾರ್ಷಿಕ ನಿವ್ವಳ ಆದಾಯವಾಗಿದೆ” ಎನ್ನುತ್ತಾರೆ ಲಕ್ಷ್ಮಿ.

ಹೊಟೆಲ್ ಕೆಲಸಗಳನ್ನು ಮನೆಯವರೇ ನಿರ್ವಹಿಸುತ್ತಾರೆ. ಹಾಗಾಗಿ ಹೆಚ್ಚಿನ ಖರ್ಚು ಬರುವುದಿಲ್ಲ. ಈ ಉಳಿತಾಯದಿಂದ ಗ್ರಾಮದಲ್ಲಿ ಹೊಸ ಮನೆಯನ್ನು ನಿರ್ಮಿಸಿದ್ದಾರೆ. ಜೊತೆಗೆ ಒಬ್ಬ ಮಗ ಡಿಪ್ಲೊಮಾ ಹಾಗೂ ಮತ್ತೊಬ್ಬ ಮಗ 9ನೇ ತರಗತಿ ಓದುತ್ತಿದ್ದಾನೆ. ಹೊಟೆಲನ್ನು ಮತ್ತಷ್ಟು ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದಾರೆ.

ಒಟ್ಟಾರೆ ಮನುವಿಕಾಸ ಸ್ವ-ಸಹಾಯ ಸಂಘದಿಂದ ಸಕಾಲದಲ್ಲಿ ದೊರೆತ ಸಾಲ ಹಾಗೂ ತರಬೇತಿಗಳು ಇವರು ಸುಸ್ಥಿರ ಬದುಕು ಕಟ್ಟಿಕೊಳ್ಳುವಲ್ಲಿ ಮತ್ತು ಆರ್ಥಿಕವಾಗಿ ಸಬಲರಾಗಲು ನೆರವಾಗಿವೆ.

ಸಂಪರ್ಕ ವಿಳಾಸ -
ಹೆಸರು: ಲಕ್ಷ್ಮಿ
ಗ್ರಾಮ: ಅರೆಕೊಪ್ಪ, ಶಿರಸಿ ತಾ.
ಸಂಘ: ರೇಷ್ಮಾ ಮನುವಿಕಾಸ ಸ್ವ-ಸಹಾಯ ಸಂಘ

# ಪರ್ಯಾಯ ಜೀವನೋಪಾಯ ನಿರ್ವಹಣೆಯಿಂದ ನೆಮ್ಮದಿ ಕಂಡ ಗೌರವ್ವ

ಶ್ರೀಮತಿ ಗೌರವ್ವ ನಾಗೇಂದ್ರಪ್ಪ ಕುಮ್ಮಾರ್ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಹೊಂಕಣ ಊರಿನವರು. ಗೃಹಿಣಿಯಾದ ಇವರು ನಾಲ್ಕನೇ ತರಗತಿಯವರೆಗೆ ಓದಿದ್ದಾರೆ. ಮನೆಯಲ್ಲಿ ಆರು ಜನರಿದ್ದಾರೆ. ಒಂದು ಎಕರೆ ಸ್ವಂತ ಜಮೀನಿದ್ದು, ಅದರಲ್ಲಿ ಕೃಷಿ ಮಾಡುತ್ತಿದ್ದಾರೆ.

"ನಾನು ಮನುವಿಕಾಸ ಸ್ವಯಂ-ಸೇವಾ ಸಂಸ್ಥೆಯ ಶ್ರೀ ವರದ ಮನುವಿಕಾಸ ಸ್ವ-ಸಹಾಯ ಸಂಘದ ಸದಸ್ಯೆಯಾಗಿದ್ದು, ಇದರ ಮುಖಾಂತರ ಈಡಲ್ ಗಿವ್ ಫೌಂಡೇಶನ್ ಅವರ' 'ನಾರಿ ಶಕ್ತಿ ಗ್ರೀನ್ ವೇ' ಯೋಜನೆಯ ಅಡಿಯಲ್ಲಿ 15 ಕೋಳಿ ಮರಿಗಳನ್ನು ಪಡೆದಿದ್ದೇನೆ. ಕೋಳಿಮರಿ ಪಡೆದ ಮೊದಮೊದಲು ಅವುಗಳನ್ನು ಜಾಗೃತೆಯಿಂದ ಸಾಕಿದೆವು ನಾಯಿ ಮತ್ತು ಮುಂಗುಸಿ ಕಾಟವಿತ್ತು. ಮನೆಯಲ್ಲೇ ಸಣ್ಣ ಗೂಡೊಂದನ್ನು ಮಾಡಿ ಪರ್ಯಾಯ ವ್ಯವಸ್ಥೆ ಮಾಡಿಕೊಂಡೆವು" ಎನ್ನುತ್ತಾರೆ ಗೌರವ್ವ.

"ಈ ಯೋಜನೆ ನನಗೆ ಬಹಳ ಉಪಯುಕ್ತವಾಗಿದ್ದು, ವಾರಕ್ಕೆ ಸರಿ ಸುಮಾರು 50 ಮೊಟ್ಟೆ ಸಿಗುತ್ತಿದೆ. ಈ ಮೊಟ್ಟೆಗಳನ್ನು 15 ರೂಗಳಿಗೆ ಒಂದರಂತೆ, ಸನಿಹದ ಅರಿಶಿಣಗುಪ್ಪಿ ಊರಿನ ಹೋಲ್‌ಸೇಲ್ ವ್ಯಾಪಾರಿಯೊಬ್ಬರು ಖರೀದಿ ಮಾಡುತ್ತಾರೆ. ವಾರಕ್ಕೆ ಏನಿಲ್ಲವೆಂದರೂ ನನಗೆ 750 ರೂ ಮೊಟ್ಟೆ ಮಾರಾಟದಿಂದ ಸಿಗುತ್ತದೆ. ತಿಂಗಳಿಗೆ 3000 ಆದಾಯವಿದೆ" ಎನ್ನುತ್ತಾರೆ ಗೌರವ್ವ.

"ಕೋಳಿಗಳಿಗೆ ಆಹಾರಕ್ಕೆಂದು ವಿಶೇಷವಾಗಿ ಹಣ ಖರ್ಚು ಮಾಡಿಲ್ಲ. ಮನೆಯಲ್ಲೇ ಇರುವ ಅಕ್ಕಿ, ಅನ್ನ, ಸೊಪ್ಪು, ಜೋಳ ಹಾಕುತ್ತೇನೆ. ಮೊಟ್ಟೆ ಮಾರಾಟದಿಂದ ವಾರ್ಷಿಕ ಆದಾಯ ಸರಿಸುಮಾರು 20 ಸಾವಿರ ರೂ ಹೆಚ್ಚಿದೆ. ಬಂದ ಲಾಭದಲ್ಲಿ ಬೇರೆ ಕಡೆಯಿಂದ ಎರಡು ಗಂಡು ಮತ್ತು ಆರು ಹೆಣ್ಣು ಕೋಳಿಗಳನ್ನು ಖರೀದಿ ಮಾಡಿದ್ದೇನೆ, ಮನೆಯಲ್ಲೇ ಇದ್ದು ಬಿಡುವಿನ ವೇಳೆಯಲ್ಲಿ ಮನೆಗೆ ಆರ್ಥಿಕವಾಗಿ ಸಹಾಯ ಮಾಡಬೇಕು ಎನ್ನುವ ಮನಸ್ಸಿದ್ದ ನನಗೆ ಸಹಾಯ ಮಾಡಿದ ಮನುವಿಕಾಸ ಸಂಸ್ಥೆಗೆ ಧನ್ಯವಾದಗಳು" ಎನ್ನುತ್ತಾರೆ ಗೌರವ್ವ.

ಸಂಪರ್ಕ ವಿಳಾಸ:
ಶ್ರೀಮತಿ ಗೌರವ್ವ ನಾಗೇಂದ್ರಪ್ಪ ಕುಮ್ಮಾರ್
ಹೊಂಕಣ ಗ್ರಾಮ, ಹಾನಗಲ್ ತಾಲೂಕು
ಹಾವೇರಿ ಜಿಲ್ಲೆ



# ಹತ್ತಿಯ ಬತ್ತಿಯಲ್ಲಿ ಅರಳಿದ ಜೀವನ

ಈ ಯಶೋಗಾಥೆಯು ಒಬ್ಬ ಗ್ರಾಮೀಣ ಮಹಿಳೆಯು ವಿನೂತನವಾದ ಜೀವನೋಪಾಯ ಚಟುವಟಿಕೆಯೊಂದನ್ನು ಅಳವಡಿಸಿಕೊಂಡು ಯಶಸ್ವಿಯಾಗಿರುವ ಮಾಹಿತಿಯನ್ನು ವಿವರಿಸುತ್ತದೆ. ಇವರು ಆಯ್ಕೆ ಮಾಡಿಕೊಂಡಿರುವುದು ಸುಲಭವಾಗಿ ಮಾಡಬಹುದಾದ ಹಾಗೂ ನಿರಂತರ ಬೇಡಿಕೆ ಇರುವ ಬತ್ತಿ ತಯಾರಿಕೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹತ್ತಿಯನ್ನು ಬಳಸಿ ಕೈಯಿಂದ ಬತ್ತಿ ತಯಾರಿಸುವ ಪರಿಪಾಠವನ್ನು ಕಾಣುತ್ತೇವೆ. ಆದರೆ ಇದಕ್ಕಾಗಿ ಪುಟ್ಟ ಯಂತ್ರವನ್ನು ಬಳಸುತ್ತಿರುವುದು ಈಕೆಯ ವಿಶೇಷ.

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಅರೆಂದೂರು ಗ್ರಾಮದ ನೇತ್ರಾವತಿ 7ನೇ ತರಗತಿ ಓದಿದ್ದಾರೆ. ಇವರ ಪತಿ ವೀರಭದ್ರ ಬಡಗಿ ಗಾರೆ ಕೆಲಸ ಮಾಡುತ್ತಾರೆ. ಕೇವಲ 1 ಎಕರೆ ಜಮೀನಿದ್ದು ಅದರಲ್ಲಿ ಭತ್ತ, ಮೆಕ್ಕೆ ಜೋಳ ಇತ್ಯಾದಿ ಮಳೆ ಆಶ್ರಿತ ಬೆಳೆಗಳನ್ನು ಹಾಕುತ್ತಾರೆ. ವರ್ಷಕ್ಕೆ ಒಂದೇ ಬೆಳೆ.

ನೇತ್ರಾವತಿ ಮನುವಿಕಾಸ ಸಂಸ್ಥೆಯ ಭಾಗ್ಯಲಕ್ಷ್ಮಿ ಸ್ವ-ಸಹಾಯ ಸಂಘದ ಸದಸ್ಯೆ. ಇವರು ಸಂಘಕ್ಕೆ ಸೇರ್ಪಡೆಯಾಗಿ 10 ವರ್ಷಗಳಾಗಿವೆ. ಮನುವಿಕಾಸ ನೀಡಿದ ಜೀವನೋಪಾಯ ಚಟುವಟಿಕೆಗಳ ತರಬೇತಿಗಳಲ್ಲಿ ಭಾಗವಹಿಸಿದ ನಂತರ ಇವರಲ್ಲಿ ಏನಾದರೂ ಆದಾಯ ಬರುವಂತಹ ಚಟುವಟಿಕೆ ಮಾಡುವ ಹುಮ್ಮಸ್ಸು ಬಂದಿತು. ಆರಂಭದಲ್ಲಿ ಮೇಣದ ಬತ್ತಿಗಳನ್ನು ತಯಾರಿಸಲು ಶುರುಮಾಡಿದರು. ಆದರೆ ಅದು ಲಾಭದಾಯಕ ಅಲ್ಲವೆಂದು ಕೆಲವೇ ದಿನಗಳಲ್ಲಿ ಇವರಿಗೆ ಮನವರಿಕೆಯಾಯಿತು.





ಯೂಟ್ಯೂಬಿನಲ್ಲಿ ದೀಪಕ್ಕೆ ಹಚ್ಚುವ ಬತ್ತಿಗಳನ್ನು ಯಂತ್ರದ ಸಹಾಯದಿಂದ ಮಾಡುವ ಒಂದು ವಿಡಿಯೋ ನೋಡಿದರು. ಅದು ಇವರಿಗೆ ಹೊಸ ಆಲೋಚನೆಯಂತೆ ಕಂಡಿತು. ಶಿರಸಿಯಲ್ಲಿ ಬತ್ತಿ ತಯಾರಿಕೆಯ ಯಂತ್ರಗಳನ್ನು ವಿತರಿಸುವ ಮತ್ತು ಹೊಸೆದ ಬತ್ತಿಗಳನ್ನು ಮರು ಖರೀದಿಸುವ ಒಬ್ಬರ ಸಂಪರ್ಕ ದೊರೆಯಿತು. 63,000 ರೂ. ಪಾವತಿಸಿ ಅವರಿಂದ ಒಂದು ಯಂತ್ರ ಖರೀದಿಸಿದರು. ಯಂತ್ರವನ್ನು ಖರೀದಿಸಲು ತಮ್ಮ ಸಂಘದಿಂದ ಆಂತರಿಕ ಸಾಲ ಪಡೆದಿದ್ದಾರೆ. ಯಂತ್ರವು ಹೆಚ್ಚಿನ ವಿದ್ಯುತ್ ಬಳಕೆ ಮಾಡುವುದಿಲ್ಲ. ಮನೆ ಬಳಕೆಯ ವಿದ್ಯುತ್ ಸಂಪರ್ಕವೇ ಸಾಕಾಗುತ್ತದೆ. ಒಂದು ಕಿಲೋ ಹತ್ತಿಯಿಂದ 1 ಕಿಲೋ ಬತ್ತಿಗಳನ್ನು ತಯಾರಿಸಬಹುದು. ಇದಕ್ಕೆ 4 ತಾಸು ಬೇಕಾಗುತ್ತದೆ. 1 ಕಿಲೋ ಬತ್ತಿಗಳನ್ನು 1000 ರೂ.ಗಳಿಗೆ ಮಾರಾಟ ಮಾಡಲಾಗುತ್ತದೆ. ತಿಂಗಳಿಗೆ ಇವರು ಸುಮಾರು 15 ಕಿಲೋಬತ್ತಿ ತಯಾರಿಸಿ 15,000 ಮೊತ್ತದ ಒಟ್ಟು ಆದಾಯ ಪಡೆಯುತ್ತಿದ್ದಾರೆ. ಒಮ್ಮೆ ತಯಾರಿಸಿದ ಬತ್ತಿಗಳು ಹಾಳಾಗುವುದಿಲ್ಲ. ಹಾಗಾಗಿ ಯಾವುದೇ ನಷ್ಟವಾಗುವುದಿಲ್ಲ. ಕಚ್ಚಾ ಪದಾರ್ಥವಾದ ಹತ್ತಿಯನ್ನು ಶಿರಸಿಯಿಂದ ಪ್ರತಿ ಕಿಲೋಗೆ 350 ರೂ.ನಂತೆ ಖರೀದಿಸುತ್ತಾರೆ. ಅಂದರೆ ಇವರಿಗೆ ಒಂದು ಕಿಲೋ ಬತ್ತಿ ಮಾರಾಟದಿಂದ ರೂ.650 ನಿವ್ವಳ ಆದಾಯ ದೊರೆಯುತ್ತಿದೆ. ಶಿರಸಿ ಹಾಗೂ ಇತರ ಪಟ್ಟಣಗಳಲ್ಲಿ, ಮುಖ್ಯವಾಗಿ ದೇವಾಲಯಗಳು ಇರುವ ಕಡೆ ಬತ್ತಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಈ ಚಟುವಟಿಕೆ ಕೈಗೊಳ್ಳಲು ತರಬೇತಿ ನೀಡಿದ ಮನುವಿಕಾಸ ಸಂಸ್ಥೆಗೆ ನೇತ್ರಾವತಿಯವರು ಕೃತಜ್ಞತೆ ಸಲ್ಲಿಸುತ್ತಾರೆ.

# ದಿನಗೂಲಿ ಅವಲಂಬನೆಯಿಂದ ಕೌಶಲ್ಯ ಆಧಾರಿತ ಸ್ವಯಂ ಉದ್ಯೋಗದತ್ತ





ಮಮತಾ ಬಿ. ಮರಾಠೆ ಶಿರಸಿ ತಾಲೂಕಿನ ದೇವನಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿದ್ದಾರೆ. ನಾಲ್ವರು ಸದಸ್ಯರು ವಾಸಿಸುತ್ತಿರುವ ಮಮತಾಳ ಕುಟುಂಬವು, ಒಂದು ಎಕರೆ ಅಡಿಕೆ ತೋಟ ಹಾಗೂ ಸಹೋದರನ ದಿನಗೂಲಿ ಕೆಲಸದಿಂದ ತಿಂಗಳಿಗೆ ಸುಮಾರು ₹12,000–13,000 ಆದಾಯವನ್ನು ಗಳಿಸುತ್ತಿತ್ತು. ಗ್ರಾಮದಲ್ಲಿ ಉದ್ಯೋಗಾವಕಾಶಗಳ ಕೊರತೆಯಿಂದ ಮಮತಾಳಿಗೆ ಸ್ವಂತ ಆದಾಯವಿಲ್ಲದೆ ಕುಟುಂಬದ ಮೇಲೆಯೇ ಆರ್ಥಿಕ ಅವಲಂಬನೆ ಇತ್ತು.

ಮೂರು ವರ್ಷಗಳ ಹಿಂದೆ ಮಮತಾ ಮಾರಿಕಾಂಬಾ ಸ್ವ-ಸಹಾಯ ಸಂಘಕ್ಕೆ ಸೇರಿದರು. ಅಲ್ಲಿ ಅವರು ಉಳಿತಾಯದ ಮಹತ್ವ, ಪರಸ್ಪರ ಸಹಕಾರ ಮತ್ತು ಕೌಶಲ್ಯ ಆಧಾರಿತ ಜೀವನೋಪಾಯದ ಅಗತ್ಯತೆಗಳನ್ನು ಅರಿತುಕೊಂಡರು. ಮಮತಾಳಿಗೆ ಹೊಲಿಗೆ ಮತ್ತು ಆರಿ ಕಸೂತಿ ಕೆಲಸದ ಮೇಲೆ ವಿಶೇಷ ಆಸಕ್ತಿ ಇತ್ತು. ಈ ಆಸಕ್ತಿಯನ್ನು ಸ್ಥಿರ ಆದಾಯದ ಮೂಲವನ್ನಾಗಿ ರೂಪಿಸಬೇಕೆಂಬ ಕನಸಿನೊಂದಿಗೆ ಅವರು ಮನುವಿಕಾಸ ಸಂಸ್ಥೆಯ ಬೆಂಬಲದಿಂದ ಎರಡು ತಿಂಗಳ ಹೊಲಿಗೆ ಮತ್ತು ಆರಿ ಕೆಲಸ ತರಬೇತಿಯಲ್ಲಿ ಭಾಗವಹಿಸಿದರು.

“ನಾನು ಓದು ಮುಗಿಸಿದ ನಂತರ ಸ್ವಂತವಾಗಿ ಸಂಪಾದಿಸಬೇಕು ಎಂಬ ಆಸೆ ಇತ್ತು. ಹೊಲಿಗೆ ಮತ್ತು ಆರಿ ಕೆಲಸದ ತರಬೇತಿ ನನಗೆ ಆತ್ಮವಿಶ್ವಾಸ ಮತ್ತು ಕೌಶಲ್ಯವನ್ನು ನೀಡಿತು. ಈಗ ನಾನು ನನ್ನ ಊರಲ್ಲೇ ಕೆಲಸ ಮಾಡಿ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದೇನೆ.” ಎಂದು ಮಮತಾ ಹೇಳುತ್ತಾರೆ.

ತರಬೇತಿ ಪೂರ್ಣಗೊಂಡ ನಂತರ ಮಮತಾ ತಮ್ಮ ಊರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೊಲಿಗೆ ಮತ್ತು ಆರಿ ಕಸೂತಿ ಸೇವೆಗಳನ್ನು ಪ್ರಾರಂಭಿಸಿದರು. ಅವರು ಮನೆಯಿಂದಲೇ ಕೆಲಸ ನಿರ್ವಹಿಸುತ್ತಿದ್ದು, ಮನೆ ಜವಾಬ್ದಾರಿಗಳ ಜೊತೆಗೆ ತಿಂಗಳಿಗೆ 15–20 ದಿನ ಕೆಲಸ ಮಾಡುತ್ತಾರೆ. ವಿವಿಧ ರೀತಿಯ ಹೊಲಿಗೆ ಮತ್ತು ಆರಿ ಕೆಲಸಗಳಿಂದ ಆದಾಯ ಗಳಿಸುತ್ತಿದ್ದಾರೆ. ಅವರ ಆದಾಯವು ಕುಟುಂಬದ ಆರ್ಥಿಕ ಸ್ಥಿತಿಯನ್ನು ಬಲಪಡಿಸಿ, ದಿನಗೂಲಿ ಅವಲಂಬನೆಯನ್ನು ಕಡಿಮೆ ಮಾಡಿದೆ.

“ಮುಂದಿನ ದಿನಗಳಲ್ಲಿ ದೇವನಹಳ್ಳಿಯಲ್ಲಿ ಸ್ವಂತ ಹೊಲಿಗೆ ಮತ್ತು ಆರಿ ಕಸೂತಿ ಅಂಗಡಿ ತೆರೆಯುವ ಯೋಜನೆ ಇದೆ. ಸ್ವ-ಸಹಾಯ ಸಂಘ ಹಾಗೂ ಮನುವಿಕಾಸ ಸಂಸ್ಥೆಯ ನಿರಂತರ ಬೆಂಬಲದೊಂದಿಗೆ ನನ್ನ ಉದ್ಯಮವನ್ನು ವಿಸ್ತರಿಸಿ, ಸ್ಥಿರ ಜೀವನೋಪಾಯ ಆದಾಯವನ್ನು ಕಂಡುಕೊಳ್ಳುವ ಗುರಿ ಹೊಂದಿದ್ದೇನೆ.” ಎನ್ನುತ್ತಾರೆ ಮಮತಾ.

# ಹೊಲಿಗೆಯಿಂದ ಬದಲಾಯಿತು ಜೀವನ

“ಮನುವಿಕಾಸ ಸಂಘಕ್ಕೆ ಸೇರಿ 5 ವರ್ಷ ಆಯಿತು. ಈ ಅವಧಿಯಲ್ಲಿ ನಮ್ಮ ಕುಟುಂಬ ಹಲವು ರೀತಿಯಲ್ಲಿ ಅಭಿವೃದ್ಧಿ ಕಂಡಿದೆ. ಇದಕ್ಕೆ ಮೂಲ ಕಾರಣ ನನಗೆ ದೊರೆತ ಹೊಲಿಗೆ ತರಬೇತಿ. ಇದರಿಂದ ಬಂದ ಆದಾಯದಿಂದ ಮಕ್ಕಳ ವಿದ್ಯಾಭ್ಯಾಸ ಮಾಡಿಸಿದ್ದೇನೆ, ಚಿನ್ನ ಖರೀದಿಸಿದ್ದೇನೆ” ಎನ್ನುವ ಸರೋಜಾ ಅವರ ಮಾತಿನಲ್ಲಿ ಆತ್ಮವಿಶ್ವಾಸ ಹಾಗೂ ಹೆಮ್ಮೆ ಇತ್ತು.

ಹೆಗಡೆಕಟ್ಟಾ ನಿವಾಸಿಯಾದ ಸರೋಜಾ ಗಜಾನನ ಆಚಾರ್ಯ ಅವರು ಶಿರಸಿಯ ಮನುವಿಕಾಸ ಸಂಸ್ಥೆಯು ರಚಿಸಿದ ಗುಲಾಬಿ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದಾರೆ. ತಿಂಗಳಿಗೆ ರೂ.100ರಂತೆ ಉಳಿತಾಯ ಮಾಡುತ್ತಾ ಸುಮಾರು 10 ಸಾವಿರ ಉಳಿಸಿದ್ದಾರೆ. ಇವರಿಗೆ 2 ಎಕರೆ ಜಮೀನಿದೆ. ಅಡಿಕೆ ಹಾಗೂ ಭತ್ತ ಬೆಳೆಯುತ್ತಾರೆ. ಜೊತೆಗೆ ಇವರ ಪತಿ ಮರಗೆಲಸ ಮಾಡುವ ಮೂಲಕ ದುಡಿಮೆ ಮಾಡುತ್ತಿದ್ದಾರೆ. ಸಂಘದಿಂದ ದೊರೆಯುವ ಆಂತರಿಕ ಮತ್ತು ಬ್ಯಾಂಕಿನ ಮತ್ತು ಕಿರು ಹಣಕಾಸು ಸಂಸ್ಥೆಗಳ ಸಾಲವನ್ನು ಕೃಷಿ ಚಟುವಟಿಕೆಗಳಾದ ಗೊಬ್ಬರ ಖರೀದಿ, ಕೂಲಿ ಪಾವತಿ, ಕಟಾವು ಇತ್ಯಾದಿಗಳಿಗೆ ಬಳಸುತ್ತಿದ್ದರು. ಸಂಘದ ಮೂಲಕ ಒಮ್ಮೆ 30 ಸಾವಿರ, ಮತ್ತೊಮ್ಮೆ 1 ಲಕ್ಷ ಹಾಗೂ 1.75 ಲಕ್ಷ ಸಾಲ ಪಡೆದು ಕೃಷಿಗೆ ಬಳಸಿಕೊಂಡಿದ್ದಾರೆ.

7ನೇ ತರಗತಿ ಓದಿರುವ ಸರೋಜಾ ಸಂಘದಲ್ಲಿ ಇತರರು ಸ್ವ-ಉದ್ಯೋಗ ಮಾಡುವುದನ್ನು ಕಂಡು ತಾವೂ ಏನಾದರೂ ದುಡಿಮೆ ಮಾಡಬೇಕೆಂದುಕೊಂಡರು. ಕಾರಣ ಕೃಷಿ ಮಾಡುವುದರಿಂದ ವರ್ಷಕ್ಕೆ ಒಂದು ಅಥವಾ ಎರಡು ಸಲ ಹಣ ದೊರೆಯುತ್ತಿತ್ತು. ಸಂಘದ ಸಹ ಸದಸ್ಯರು ವಿವಿಧ ಉದ್ಯೋಗ ಮಾಡುತ್ತಾ ದಿನನಿತ್ಯ ಹಾಗೂ ತಿಂಗಳಿಗೊಮ್ಮೆಯಾದರೂ ಹಣ ಗಳಿಸುತ್ತಿದ್ದರು. ಮನೆ ವಹಿವಾಟಿಗೆ ಹಾಗೂ ಮಕ್ಕಳ ಶಿಕ್ಷಣ ಮತ್ತು ಇತರೆ ವೆಚ್ಚಗಳಿಗೆ ತಾವೇ ಗಳಿಸುತ್ತಿದ್ದರು. ಇದು ಸರೋಜಾ ಅವರಿಗೆ ಸ್ಫೂರ್ತಿಯಾಗಿತ್ತು.

ಈ ಬಗ್ಗೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳೊಂದಿಗೆ ಚರ್ಚಿಸಿದಾಗ ಹೊಲಿಗೆ ಮಾಡುವ ಸಲಹೆ ದೊರೆಯಿತು. ಇವರಿಗೂ ಸಹ ಹೊಲಿಗೆಯು ಕಡಿಮೆ ಬಂಡವಾಳದಿಂದ ಮಾಡಬಹುದಾದ ದುಡಿಮೆ ಎನಿಸಿದ್ದರಿಂದ ಅದನ್ನೇ ಆಯ್ಕೆ ಮಾಡಿಕೊಂಡರು. ತಮ್ಮ ಉಳಿತಾಯದಿಂದಲೇ ಹೊಲಿಗೆ ಯಂತ್ರ ಖರೀದಿಸಿ ಗ್ರಾಮದ ಆಯಕಟ್ಟಿನ ಸ್ಥಳದಲ್ಲಿ ಒಂದು ಮಳಿಗೆ ಬಾಡಿಗೆ ಪಡೆದು ಹೊಲಿಗೆ ಆರಂಭಿಸಿದರು.






ಮುಖ್ಯವಾಗಿ ಹೆಣ್ಣುಮಕ್ಕಳ ಉಡುಪುಗಳು, ಮಕ್ಕಳ ಯೂನಿಫಾರ್ಮ್ ಹೊಲಿಯುವಲ್ಲಿ ಇವರಿಗೆ ಹೆಚ್ಚು ಕೌಶಲ್ಯವಿದೆ. ಹಾಗಾಗಿ ಸುತ್ತ-ಮುತ್ತಲ ಹಳ್ಳಿಯವರು ಇವರಿಂದಲೇ ಬಟ್ಟೆ ಹೊಲಿಸಲು ಇಷ್ಟಪಡುತ್ತಾರೆ. “ವರ್ಷ ಪೂರ್ತಿ ಬೇಡಿಕೆ ಇದೆ, ಹೆಚ್ಚು ಕೆಲಸ ಇರುವಾಗ ಸಹಾಯಕ್ಕೆ ಬೇರೆ ಹೆಣ್ಣುಮಕ್ಕಳನ್ನು ಕರೆಯುತ್ತೇನೆ. ತಿಂಗಳಿಗೆ ರೂ.45,000 ಆದಾಯ ಪಡೆಯುತ್ತಿದ್ದೇನೆ, ಅದರಲ್ಲಿ ಅಂಗಡಿ ಬಾಡಿಗೆ ಮತ್ತು ವಿದ್ಯುತ್ ವೆಚ್ಚ ರೂ.2000 ಬರುತ್ತದೆ. ಸುಮಾರು 40,000 ನಿವ್ವಳ ಆದಾಯ ದೊರೆಯುತ್ತಿದೆ.” ಎನ್ನುತ್ತಾರೆ ಸರೋಜಾ.

“ಇದು ಗ್ರಾಮ ಮಟ್ಟದಲ್ಲಿ ಒಳ್ಳೆಯ ಆದಾಯ, ಇತರ ಹೆಣ್ಣುಮಕ್ಕಳಂತೆ ತಾನೂ ಸ್ವ-ಉದ್ಯೋಗ ಮಾಡಬೇಕೆಂಬ ಇವರ ಮನೋಬಲವೇ ಇಷ್ಟೆಲ್ಲಾ ದುಡಿಮೆ ಮಾಡಲು ಸಾಧ್ಯವಾಗಿದೆ” ಎಂಬುದು ಮನುವಿಕಾಸ ಸಂಸ್ಥೆಯ ಕ್ಷೇತ್ರ ಸಂಯೋಜಕಿಯಾದ ಭವಾನಿ ನಾಯ್ಕ್ ಅವರ ಅಭಿಪ್ರಾಯ.

# ಬದುಕಿಗೆ ಸ್ವಾವಲಂಬನೆಯ ತಿರುವು ಕೊಟ್ಟ 'ಕಾರ್ನರ್ ಕೆಫೆ'

"ನಾನು ಈ ಫಾಸ್ಟ್ ಫುಡ್ ಅಂಗಡಿ ಶುರು ಮಾಡಿದ ನಂತರ ಆದಾಯ ಹೆಚ್ಚಾಗಿದೆ, ದಿನಕ್ಕೆ ಸುಮಾರು 5 ಸಾವಿರ ವ್ಯಾಪಾರ ಮಾಡುತ್ತೇನೆ, ಮನುವಿಕಾಸ ಸಂಸ್ಥೆಯ ಮಾರ್ಗದರ್ಶನ ಹಾಗೂ ಸ್ವ-ಸಹಾಯ ಸಂಘದ ಬೆಂಬಲದಿಂದ ಈ ಬದಲಾವಣೆ ಸಾಧ್ಯವಾಗಿದೆ" – ಶ್ರೀಮತಿ ಈಶ್ವರಿ ಪೂಜಾರಿ, ಕಲ್ಮಟ್ಟಿಹಳ್ಳ.

ಹೌದು. ಕೇವಲ 1ನೇ ತರಗತಿ ವಿದ್ಯಾಭ್ಯಾಸ ಮಾಡಿರುವ ಈಶ್ವರಿ ಪೂಜಾರಿ ಇಂದು ಪುಟ್ಟ ಸ್ವಯಂ ಉದ್ಯಮವನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ. ಇವರು ಮನುವಿಕಾಸ ಸಂಸ್ಥೆಯು ರಚಿಸಿದ ಮಹಾಗಣಪತಿ ಸ್ವ-ಸಹಾಯ ಸಂಘದ ಸದಸ್ಯರು. ಸಂಘದಲ್ಲಿ ತಿಂಗಳಿಗೆ ರೂ.100 ಉಳಿತಾಯ ಮಾಡುತ್ತಿದ್ದು ಇಲ್ಲಿಯವರೆಗೆ 41,000 ಉಳಿತಾಯ ಮಾಡಿದ್ದಾರೆ. ಮನೆಯಲ್ಲಿ ಒಂದು ಆಕಳು ಇದೆ. ಅದರ ಹಾಲು ಮಾರಾಟದಿಂದಲೂ ಆದಾಯ ಪಡೆಯುತ್ತಿದ್ದಾರೆ.

ಮನುವಿಕಾಸ ಸಂಸ್ಥೆಯು ನಡೆಸಿದ ಉದ್ಯಮಶೀಲತೆ ತರಬೇತಿಯಲ್ಲಿ ಭಾಗವಹಿಸಿದ್ದ ಇವರಿಗೆ ಯಾವುದಾದರೂ ಉದ್ಯಮ ಆರಂಭಿಸುವ ಯೋಚನೆ ಬಂದಿತು. ಮನೆಯಲ್ಲಿ ಚರ್ಚೆ ಮಾಡಿ ಫಾಸ್ಟ್ ಫುಡ್ ಅಂಗಡಿ ತೆರೆಯುವ ತೀರ್ಮಾನ ಮಾಡಿದರು. ತಮ್ಮ ಸ್ವಂತ ಗ್ರಾಮವಾದ ಕಲ್ಮಟ್ಟಿಹಳ್ಳದಲ್ಲಿ ಕೆಲವೇ ಮನೆಗಳಿರುವುದರಿಂದ ಅಲ್ಲಿ ಅಂಗಡಿ ತೆರೆದರೆ ವ್ಯಾಪಾರ ಸರಿಯಾಗಿ ನಡೆಯುವುದಿಲ್ಲ ಎಂದು ನಿರ್ಧರಿಸಿ ಕಾನಸೂರು ಗ್ರಾಮದಲ್ಲಿ ಅಂಗಡಿ ತೆರೆದರು. ಇದೊಂದು ಉತ್ತಮ ನಿರ್ಧಾರವಾಗಿತ್ತು. ಏಕೆಂದರೆ ಕಾನಸೂರು ಹೆಚ್ಚು ವ್ಯಾಪಾರ ವಹಿವಾಟು ನಡೆಯುವ ಕೇಂದ್ರ. ಸುತ್ತ-ಮುತ್ತಲ ಗ್ರಾಮಗಳ ಜನರು ಇಲ್ಲಿಗೆ ಬರುವುದರಿಂದ ಜನಜಂಗುಳಿ ಹೆಚ್ಚು.







"ಅಂಗಡಿ ಶುರು ಮಾಡಿದ ಕೆಲವೇ ದಿನಗಳಲ್ಲಿ ಉತ್ತಮ ವ್ಯಾಪಾರ ನಡೆಯತೊಡಗಿತು. ದಿನಕ್ಕೆ ಸರಾಸರಿ ರೂ.5000 ವಹಿವಾಟು ನಡೆಯಲು ಆರಂಭವಾಗಿ, ನನಗೆ ಇದ್ದ ಆತಂಕ ದೂರವಾಯಿತು. ಬೆಳಿಗ್ಗೆ 10ರಿಂದ ರಾತ್ರಿ 10 ಗಂಟೆಯವರೆಗೆ ವ್ಯಾಪಾರ ನಡೆಸುತ್ತೇನೆ. ನನ್ನ ಅಂಗಡಿಯಲ್ಲಿ ತಯಾರಿಸುವ ಗೋಬಿ, ಗೋಳಿ ಬಜೆ, ಮಿರ್ಚಿ ಮಂಡಕ್ಕಿ ಗ್ರಾಹಕರಿಗೆ ಅಚ್ಚುಮೆಚ್ಚು. ಫಾಸ್ಟ್ ಫುಡ್ ವ್ಯಾಪಾರದಿಂದ ತಿಂಗಳಿಗೆ ಸರಾಸರಿ ರೂ.1,50,000 ವಹಿವಾಟು ನಡೆಯುತ್ತಿದ್ದು ಇದರಲ್ಲಿ ಶೇ.50ರಷ್ಟು ನಿವ್ವಳ ಲಾಭ ದೊರೆಯುತ್ತಿದೆ." ಎನ್ನುತ್ತಾರೆ ಈಶ್ವರಿ ಪೂಜಾರಿ.

ಅಂಗಡಿ ತೆರೆಯಲು ಬೇಕಾದ ಬಂಡವಾಳವನ್ನು ಇವರು ಸದಸ್ಯರಾಗಿರುವ ಮಹಾಗಣಪತಿ ಸ್ವ-ಸಹಾಯ ಸಂಘದ ಮೂಲಕ ಬ್ಯಾಂಕ್ ಆಫ್ ಬರೋಡಾದಿಂದ ರೂ. 5 ಲಕ್ಷ ಸಾಲ ಪಡೆದು ಪ್ರತಿ ತಿಂಗಳು ಸಾಲವನ್ನು ನಿಯಮಿತವಾಗಿ ತೀರಿಸುತ್ತಿದ್ದಾರೆ. ಸಾಲದ ಕಂತು ತೀರಿಸಿ ಉಳಿಕೆ ಹಣದಲ್ಲಿ 3 ಎಕರೆ ಜಮೀನನ್ನು ಗೇಣಿಗೆ ಪಡೆದು ವ್ಯವಸಾಯ ಮಾಡುತ್ತಿದ್ದು ಮುಖ್ಯವಾಗಿ ಭತ್ತ ಬೆಳೆಯುತ್ತಿದ್ದಾರೆ. ಅಕ್ಕಿಯನ್ನು ಮನೆಗೆ ಬಳಸಿದರೆ, ಮೇವು ಜಾನುವಾರುಗಳಿಗೆ ಉಪಯೋಗವಾಗುತ್ತದೆ.

ಪುಟ್ಟ ಕುಟುಂಬ ಇವರದು. ಇವರ ಪತಿ ಅಡಿಕೆ ತೋಟಗಳಲ್ಲಿ ಶೇರುಗಾರರಾಗಿ ಕಾರ್ಯನಿರ್ವಹಿಸುತ್ತಾರೆ. ಮಗ ಹಾಗೂ ಮಗಳು ಓದುತ್ತಿದ್ದು, ಬಿಡುವಾದಾಗ ಅಮ್ಮನಿಗೆ ವ್ಯಾಪಾರದಲ್ಲಿ ಸಹಕರಿಸುತ್ತಾರೆ. "ಮನೆಯವರ ಸಹಕಾರದಿಂದ ಹಾಗೂ ನಾವು ನೀಡಿದ ಮಾಹಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಯಶಸ್ವೀ ಉದ್ಯಮಿಯಾಗಿರುವ ಇವರು ಇತರ ಹೆಣ್ಣುಮಕ್ಕಳಿಗೆ ಮಾದರಿ." ಎನ್ನುತ್ತಾರೆ ಮನುವಿಕಾಸ ಸಂಸ್ಥೆಯ ಕ್ಷೇತ್ರ ಸಂಯೋಜಕಿ ಭವಾನಿ ನಾಯ್ಕ್.

# ಮಹಿಳಾ ಡೈರಿ ಸ್ಥಾಪನೆ ಮೂಲಕ ಮಾದರಿ ನಡೆ

“ಮಹಿಳೆಯರೇ ಸೇರಿ ನಮ್ಮೂರಿನಲ್ಲಿ ಕೆ.ಎಂ.ಎಫ್ ಡೈರಿ ಸ್ಥಾಪಿಸಬೇಕೆಂದು ಹೊರಟಾಗ ಹಲವು ಸವಾಲುಗಳು ಎದುರಾದವು. ನಿಮ್ಮ ಕೈಲಿ ಆಗುವುದೇ ಇಲ್ಲ ಎಂದವರೇ ಬಹಳ ಜನ. ಜೊತೆಗೆ ಸ್ಥಳದ ಸಮಸ್ಯೆ, ಬಂಡವಾಳದ ಸಮಸ್ಯೆಯೂ ಇತ್ತು. ಆದರೆ ಎಲ್ಲವನ್ನೂ ಮೀರಿ ಡೈರಿ ಸ್ಥಾಪಿಸಿದೆವು. 14 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದೆ. ಲಾಭವನ್ನೂ ಮಾಡುತ್ತಿದೆ” - ನ್ಯಾನ್ಸಿ, ನಾಗಶೆಟ್ಟಿಕೊಪ್ಪ.

ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ನಾಗಶೆಟ್ಟಿಕೊಪ್ಪ ಗ್ರಾಮದಲ್ಲಿರುವ 'ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ'ದ ಕಾರ್ಯದರ್ಶಿಯಾಗಿರುವ ನ್ಯಾನ್ಸಿ ಮೇಲಿನ ಮಾತುಗಳನ್ನು ಹೇಳುತ್ತಿರುವಾಗ ಅವರಲ್ಲಿ ಅಸಾಧ್ಯವನ್ನು ಸಾಧ್ಯವಾಗಿಸಿದ ತೃಪ್ತಿ ಕಾಣುತ್ತಿತ್ತು. ಇವರ ಪ್ರಯತ್ನಗಳಿಗೆ ಮನುವಿಕಾಸ ಸಂಸ್ಥೆಯು ತರಬೇತಿಗಳ ಮೂಲಕ ಹಾಗೂ ಆಯ್ದ ಮಹಿಳಾ ಸದಸ್ಯರಿಗೆ ಹಸುಗಳನ್ನು ಖರೀದಿಸಲು ಸಾಲದ ರೂಪದಲ್ಲಿ ಹಣಕಾಸು ನೆರವು ಒದಗಿಸಿದೆ.

ಅದು 2010ನೇ ಇಸವಿ. ನಾಗಶೆಟ್ಟಿಕೊಪ್ಪ ಗ್ರಾಮದ ಹೈನುಗಾರರಿಗೆ ಕರ್ನಾಟಕ ಹಾಲು ಮಹಾಮಂಡಳದ (ಕೆ.ಎಂ.ಎಫ್) ವತಿಯಿಂದ ತರಬೇತಿ ಹಮ್ಮಿಕೊಂಡಿದ್ದರು. ನ್ಯಾನ್ಸಿಯೂ ಅದರಲ್ಲಿ ಭಾಗಿಯಾಗಿದ್ದರು. ಕೊನೆಯ ದಿನ ಅನಿಸಿಕೆಗಳನ್ನು ತಿಳಿಸುವಾಗ “ನಮ್ಮೂರಿನಲ್ಲಿ ಹಾಲಿನ ಡೈರಿಯೇ ಇಲ್ಲ. ಹಾಲು ಹಾಕಲು ದೂರದ ಊರಿಗೆ ಹೋಗಬೇಕು, ಆದುದರಿಂದ ಹಸು ಸಾಕುವವರ ಸಂಖ್ಯೆಯೂ ಕಡಿಮೆ ಇದೆ” ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೆ.ಎಂ.ಎಫ್ ಅಧಿಕಾರಿಗಳು ನಿಮ್ಮ ಗ್ರಾಮದಲ್ಲಿ ಯಾರಾದರೂ ಡೈರಿ ಸ್ಥಾಪಿಸಲು ಮುಂದೆ ಬಂದರೆ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು. ಜೊತೆಗೆ “ನೀವು ಮಹಿಳೆಯರೇ ಸೇರಿ ಡೈರಿ ಸ್ಥಾಪಿಸಿ” ಎಂದು ಉತ್ತೇಜನದ ಮಾತುಗಳನ್ನಾಡಿದರು.

ತರಬೇತಿ ಮುಗಿಸಿ ಊರಿಗೆ ವಾಪಸಾದ ನ್ಯಾನ್ಸಿ ಅವರ ಮನಸಿನಲ್ಲಿ ಅಧಿಕಾರಿಗಳು ಹೇಳಿದ ಮಾತುಗಳೇ ನೆನಪಾಗುತ್ತಿದ್ದವು. ಗ್ರಾಮದ ಕೆಲವು ಸ್ನೇಹಿತರ ಜೊತೆ ಇದರ ಸಾಧ್ಯತೆಗಳ ಬಗ್ಗೆ ಚರ್ಚಿಸಿದರು. ತಮ್ಮ ಮನೆಯಲ್ಲಿಯೂ ಈ ಪ್ರಯತ್ನಗಳ ಕುರಿತು ಮಾತನಾಡಿದರು. ಡೈರಿ ಸ್ಥಾಪಿಸಲು ಇವರ ಮನೆಯ ಹಣಕಾಸಿನ ಪರಿಸ್ಥಿತಿಯೂ ಒಂದು ಕಾರಣ. ಇವರ ಪತಿ ಸಂತಾನ್ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮೂವರು ಮಕ್ಕಳು. ಇವರದು ಭೂರಹಿತ ಕುಟುಂಬ. 10ನೇ ತರಗತಿ ಓದಿರುವ ನ್ಯಾನ್ಸಿ ಅವರಿಗೂ ಏನಾದರೂ ಸ್ವಂತ ದುಡಿಮೆ ಮಾಡುವ ಹಂಬಲ ಇತ್ತು. ಇವೆಲ್ಲಾ ಕಾರಣಗಳಿಂದ ಹಾಲಿನ ಡೈರಿ ಸ್ಥಾಪಿಸುವ ಬಗ್ಗೆ ಒಲವು ತೋರಿದರು. ಆರಂಭದಲ್ಲಿ ಹೇಳಿದಂತೆ ಹಲವು ಸವಾಲುಗಳು ಎದುರಾದವು. ಎಲ್ಲವನ್ನೂ ಎದುರಿಸಿ 2010ರಲ್ಲಿ ಡೈರಿ ಆರಂಭಿಸಿಯೇಬಿಟ್ಟರು.






ಗ್ರಾಮದ 13 ಮಹಿಳಾ ಸದಸ್ಯರ ಮನವೊಲಿಸಿ ಮಹಿಳಾ ಸಹಕಾರ ಸಂಘ ಸ್ಥಾಪಿಸಿದರು. ಎಲ್ಲರೂ ಸೇರಿ ಆರಂಭಿಕ ಬಂಡವಾಳ ಕಲೆಹಾಕಿದರು. ಒಂದು ಸಣ್ಣ ಮನೆಯನ್ನು ಬಾಡಿಗೆಗೆ ಪಡೆದರು. ಮೊದಲ ವರ್ಷ ಕೇವಲ 20 ಹೈನುಗಾರರು ಇವರ ಡೈರಿಯ ಸದಸ್ಯರಾಗಿ ಆತಂಕ ಮೂಡಿದ್ದು ನಿಜ. ಆದರೆ ಕ್ರಮೇಣ ಗ್ರಾಮಸ್ಥರು ಇವರ ಕೆಲಸವನ್ನು ಗಮನಿಸಿ ಸದಸ್ಯರ ಸಂಖ್ಯೆ ಹೆಚ್ಚುತ್ತಾ ಹೋಗಿ ಪ್ರಸ್ತುತ 150 ಷೇರು ಖರೀದಿಸಿ ಸದಸ್ಯರಾಗಿದ್ದಾರೆ. ಅಂದರೆ ಗ್ರಾಮದಲ್ಲಿ ಹಸು ಸಾಕಣೆ ಮಾಡುವ ಬಹುತೇಕರು ಇವರ ಸಹಕಾರ ಸಂಘದ ಸದಸ್ಯರಾಗಿರುವುದು ವಿಶೇಷ. ಡೈರಿಯಲ್ಲಿ ಕಾರ್ಯದರ್ಶಿ ನ್ಯಾನ್ಸಿ ಅವರನ್ನು ಹೊರತುಪಡಿಸಿ ಇಬ್ಬರು ನೌಕರರಿದ್ದಾರೆ. ಇಬ್ಬರೂ ಮಹಿಳೆಯರೇ. ಒಬ್ಬರು ಹಾಲು ಪರೀಕ್ಷಕರು ಹಾಗೂ ಮತ್ತೊಬ್ಬರು ಕಂಪ್ಯೂಟರ್ ಆಪರೇಟರ್.

ಪ್ರತಿದಿನ ಇವರ ಡೈರಿಯಿಂದ ಸರಾಸರಿ 400 ಲೀಟರ್ ಹಾಲು ಸಂಗ್ರಹವಾಗುತ್ತದೆ. ತಿಂಗಳಿಗೆ ಸುಮಾರು ರೂ.5,00,000 ಬಟವಾಡೆ ಮಾಡುತ್ತಾರೆ. ಹಾಲು ಸಂಗ್ರಹಣೆಯ ಜೊತೆಗೆ ಡೈರಿಯ ಮೂಲಕ ಹಿಂಡಿ, ಬೂಸಾ ವ್ಯಾಪಾರವನ್ನೂ ನಡೆಸುತ್ತಿದ್ದಾರೆ.

ನ್ಯಾನ್ಸಿ ಗ್ರಾಮಜ್ಯೋತಿ ಮನುವಿಕಾಸ ಮಹಿಳಾ ಸಂಘದ ಸದಸ್ಯೆ. ಸಂಘದ ಮೂಲಕ ಸಂಸ್ಥೆಯಿಂದ ದೊರೆಯುವ ಸಾಲ ಸವಲತ್ತುಗಳು, ತರಬೇತಿಗಳನ್ನು ಪಡೆಯುತ್ತಾರೆ. ಮೊದಲೇ ಹೇಳಿದಂತೆ ಭೂರಹಿತ ಕುಟುಂಬಗಳಿಗೆ ಹಸು ಖರೀದಿಸಲು ಸಾಲವನ್ನೂ ಒದಗಿಸಿದ್ದಾರೆ. ನ್ಯಾನ್ಸಿ ಅವರಿಗೂ ಸಹ ಒಂದು ಹಸು ಇದ್ದು, ಪ್ರತಿದಿನ 8 ಲೀಟರ್ ಹಾಲು ಮಾರಾಟ ಮಾಡುತ್ತಾರೆ. ಕಾರ್ಯದರ್ಶಿ ಸಂಬಳ ಹಾಗೂ ಹಾಲು ಮಾರಾಟ ಎಲ್ಲವೂ ಸೇರಿ ತಿಂಗಳಿಗೆ ರೂ. 12000 ದುಡಿಯುತ್ತಿದ್ದಾರೆ ನ್ಯಾನ್ಸಿ. ಇವರ ಸಂಘಕ್ಕೆ ಕೆ.ಎಂ.ಎಫ್ ವತಿಯಿಂದ ಉತ್ತಮ ಸಹಕಾರ ಸಂಘವೆಂಬ ಮನ್ನಣೆ ದೊರೆತಿದೆ. ಗ್ರಾಮದಲ್ಲಿ ಜನರೂ ಸಹ ಇವರು ಒಗ್ಗಟ್ಟಿನಿಂದ ಸಂಘ ಕಟ್ಟಿ ಯಶಸ್ವಿಯಾಗಿ ಡೈರಿ ನಡೆಸುತ್ತಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸುತ್ತಾರೆ.

# ಮನುವಿಕಾಸ ಸಂಸ್ಥೆಯಿಂದ ಅವಸಾನದ ಅಂಚಿನಲ್ಲಿರುವ 337 ಕೆರೆಗಳ ಪುನರುಜ್ಜೀವನ

ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಅನಿಯಮಿತವಾದ ಮಳೆ, ಅಕಾಲಿಕ ಮಳೆ ಮತ್ತು ಮಳೆಯ ಕೊರತೆಯಿಂದ ದೇಶದ ಅತೀ ಹೆಚ್ಚು ಜನರಿಗೆ ಉದ್ಯೋಗದ ಆಶ್ರಯವಾದ ಕೃಷಿ ವಲಯ ನಲುಗಿ ಹೋಗುತ್ತಿದೆ. ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯ ನ್ಯಾಯದ ಕೂಗು ಸ್ಥಳೀಯ ರೈತ ಸಮುದಾಯದಲ್ಲೂ ಪ್ರತಿಧ್ವನಿಸುತ್ತಿದೆ. ಕರ್ನಾಟಕದ ಬಹುತೇಕ ಜಿಲ್ಲೆಗಳು ಬರಪೀಡಿತವಾಗಿದ್ದು ಸಣ್ಣ ಮತ್ತು ಅತಿ ಸಣ್ಣ ರೈತರು ಉದ್ಯೋಗ ಅರಸಿ ನಗರಗಳತ್ತ ಮುಖ ಮಾಡಿದ್ದಾರೆ. ಸರ್ಕಾರ ಕೂಡ ಅನೇಕ ಯೋಜನೆಗಳನ್ನು ರೂಪಿಸಿ ಗ್ರಾಮೀಣ ಭಾಗದವರ ವಲಸೆ ತಡೆಯುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆ.

ಬಿದ್ದ ಕಡಿಮೆ ನೀರನ್ನು ಹಿಡಿದು ನಿಲ್ಲಿಸಿ, ಕೆರೆ ಕಟ್ಟೆಗಳಲ್ಲಿ ಶೇಖರಿಸಿ, ಕೃಷಿಯನ್ನು ಗೆದ್ದ ಅನೇಕ ಉದಾಹರಣೆಗಳು ಇರುವಾಗ, ಕೆರೆಗಳೇ ಊರಿನ ನೀರಿನ ಆಧಾರವಾಗಿದ್ದು, ಅನೇಕ ವರ್ಷಗಳಿಂದ ಕೆರೆಗಳಲ್ಲಿ ಹೂಳು ಸಂಗ್ರಹವಾಗಿ, ನೀರು ಹಿಡಿದುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡು ಅಭಿವೃದ್ಧಿಯ ದಾರಿ ಕಾಯುತ್ತಿರುವ ಅದೆಷ್ಟೋ ಕೆರೆಗಳು ಫಲವತ್ತಾದ ಮಣ್ಣನ್ನು ಒಡಲೊಳಗೆ ತುಂಬಿಕೊಂಡು ತಮ್ಮ ಕಾರ್ಯವನ್ನು ಸ್ಥಗಿತಗೊಳಿಸಿವೆ.

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕಳೆದ 23 ವರ್ಷಗಳಿಂದ ಹಲವು ಸಮಾಜಮುಖಿ ಜನಪರ ಕಾರ್ಯಚಟುವಟಿಕೆಗಳಾದ ನೆಲ - ಜಲ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ಆರ್ಥಿಕ ಸ್ವಾವಲಂಬನೆ, ಸುಸ್ಥಿರ ಕೃಷಿ ಅಭಿವೃದ್ಧಿಗಳ ಮೂಲಕ ತಳಮಟ್ಟದ ಜನಸಮುದಾಯವನ್ನು ತಲುಪಿದೆ.

ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ ಮತ್ತು ರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯನ್ನು ರೈತ ಸಮುದಾಯಕ್ಕೆ ತಿಳಿಯಪಡಿಸಲು ಮನುವಿಕಾಸ ಸಂಸ್ಥೆಯು ಈಗಾಗಲೇ 337 ಸಣ್ಣ, ಮಧ್ಯಮ ಮತ್ತು ದೊಡ್ಡ ಕೆರೆಗಳನ್ನು ಉತ್ತರಕನ್ನಡ, ಹಾವೇರಿ, ಶಿವಮೊಗ್ಗ, ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪುನರುಜ್ಜೀವನಗೊಳಿಸಿ ರೈತರ ಮುಖದಲ್ಲಿ ಸ್ವಾವಲಂಬನೆಯ ನಗುವನ್ನು ಮೂಡಿಸಿದೆ.

ಮನುವಿಕಾಸ ಸಂಸ್ಥೆಯು ಎರಡು ಎಕರೆ ವಿಸ್ತೀರ್ಣದಿಂದ ಒಳಗೊಂಡು 160 ಎಕರೆಯ ವಿಸ್ತೀರ್ಣದವರೆಗಿನ ಅವಸಾನದ ಅಂಚಿನಲ್ಲಿರುವ ಕೆರೆಗಳನ್ನು ಗುರುತಿಸಿ, ಪುನರುಜ್ಜೀವನಗೊಳಿಸಿದೆ.

## ಪುನರುಜ್ಜೀವನಗೊಂಡ ಕೆರೆಗಳ ವಿವರ

| ಜಿಲ್ಲೆ | ತಾಲೂಕು | ಪುನರುಜ್ಜೀವನಗೊಂಡ ಕೆರೆಗಳ ಸಂಖ್ಯೆ |
|---|---|---|
| ಉತ್ತರ ಕನ್ನಡ | ಶಿರಸಿ | 57 |
| | ಮುಂಡಗೋಡ | 29 |
| | ಯಲ್ಲಾಪುರ | 1 |
| ಒಟ್ಟು | | 87 |
| ಶಿವಮೊಗ್ಗ | ಸೊರಬ | 37 |
| | ಶಿಕಾರಿಪುರ | 6 |
| ಒಟ್ಟು | | 43 |

| ಜಿಲ್ಲೆ | ತಾಲೂಕು | ಪುನರುಜ್ಜೀವನಗೊಂಡ ಕೆರೆಗಳ ಸಂಖ್ಯೆ |
|---|---|---|
| ಹಾವೇರಿ | ಹಾವೇರಿ | 1 |
| | ಹಾನಗಲ್ | 89 |
| | ಶಿಗ್ಗಾವಿ | 11 |
| | ಹಿರೇಕೆರೂರು | 17 |
| | ರಟ್ಟಿಹಳ್ಳಿ | 1 |
| | ಬ್ಯಾಡಗಿ | 21 |
| ಒಟ್ಟೂ | | 140 |
| ಧಾರವಾಡ | ಧಾರವಾಡ | 1 |
| | ಕಲಘಟಗಿ | 62 |
| | ಕುಂದಗೋಳ | 2 |
| | ಹುಬ್ಬಳ್ಳಿ | 2 |
| ಒಟ್ಟೂ | | 67 |
| ಒಟ್ಟೂ | 14 ತಾಲೂಕುಗಳು | 337 |

ಮನುವಿಕಾಸ ಸಂಸ್ಥೆಯು ಈ ಕಾರ್ಯಕ್ರಮದಿಂದ ಸರಿಸುಮಾರು 54,000 ಹೆಕ್ಟೇರ್ ಜಮೀನಿಗೆ ಹೆಚ್ಚುವರಿಯಾಗಿ ನೀರಾವರಿ ಸೌಲಭ್ಯವನ್ನು ಒದಗಿಸಿದೆ ಮತ್ತು 36,000 ರೈತರಿಗೆ ಕೃಷಿ ಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸಲು, 18,000 ರೈತ ಕುಟುಂಬಗಳಿಗೆ ಎರಡನೇ ಬೆಳೆಯನ್ನು ಬೆಳೆಯಲು ಮತ್ತು ಪ್ರತಿವರ್ಷ ಸರಾಸರಿ 10,000 ಮಿಲಿಯನ್ ಲೀಟರ್ ನೀರನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗಿದೆ.

ಮುಖ್ಯವಾಗಿ ಸಂಸ್ಥೆಯು ರೈತ ಸಮುದಾಯದ ಸಹಭಾಗಿತ್ವದೊಂದಿಗೆ ಕೆರೆಗಳನ್ನು ಪುನರುಜ್ಜೀವನಗೊಳಿಸುತ್ತದೆ. ಕೆರೆಯನ್ನು ಪುನರುಜ್ಜೀವನಗೊಳಿಸುವ ಪೂರ್ವದಲ್ಲಿ ಹಳ್ಳಿಗಳ ಪ್ರಾಥಮಿಕ ಸಮೀಕ್ಷೆ ನಡೆಸಿ ಕೆರೆಯ ಈಗಿನ ಸ್ಥಿತಿಗತಿಯನ್ನು ಪರಿಶೀಲಿಸುತ್ತದೆ. ಹಳ್ಳಿಯ ರೈತರಿಗೆ ಕೆರೆಯ ಪುನರುಜ್ಜೀವನದಿಂದಾಗುವ ಪ್ರಯೋಜನಗಳ ಬಗೆಗೆ ನಿರಂತರ ಸಭೆ ಮತ್ತು ಚರ್ಚೆ ನಡೆಸುತ್ತದೆ. ಗ್ರಾಮದ ಜನಸಂಖ್ಯೆ, ಕೆರೆಯ ಅಚ್ಚುಕಟ್ಟು ಪ್ರದೇಶಗಳ ರೈತರ ಸಂಖ್ಯೆ, ಕೆರೆಯನ್ನು ಹೂಳೆತ್ತುವುದರಿಂದ ಎಷ್ಟು ಎಕರೆ ಜಮೀನಿಗೆ ಮತ್ತು ರೈತರಿಗೆ ಅನುಕೂಲವಾಗುತ್ತದೆ ಮತ್ತು ಹೂಳೆತ್ತಿದ ನಂತರದಲ್ಲಿ ಕೆರೆಯಲ್ಲಿ ಶೇಖರವಾಗುವ ನೀರಿನ ಪ್ರಮಾಣವನ್ನು ಸಂಸ್ಥೆ ದಾಖಲೀಕರಣ ನಡೆಸುತ್ತದೆ. ಹೂಳೆತ್ತಬೇಕಾದ ಕೆರೆಯ ಹೂಳು ಮತ್ತು ನೀರನ್ನು ಅದು ಕೃಷಿ ಚಟುವಟಿಕೆಗೆ ಯೋಗ್ಯವೇ ಎಂದು ಕೃಷಿ ವಿಜ್ಞಾನ ಕೇಂದ್ರ ಮತ್ತು ಸರಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸುತ್ತದೆ. ನಂತರದಲ್ಲಿ ಎಲ್ಲ ಭಾಗಿದಾರರ ಒಪ್ಪಿಗೆ ಪಡೆದು ಗ್ರಾಮ ಪಂಚಾಯತಿಯ ಸಹಯೋಗದೊಂದಿಗೆ ಕೆರೆಯನ್ನು ಹೂಳೆತ್ತಲು ಪರವಾನಗಿ ಪತ್ರ ಪಡೆಯುತ್ತದೆ. ಕೆರೆಯ ಹೂಳನ್ನು ತೆಗೆಯಲು ಯಂತ್ರಗಳನ್ನು ಸಂಸ್ಥೆಯು ಉಚಿತವಾಗಿ ಒದಗಿಸಿ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಕೆರೆಯ ಹೂಳನ್ನು ತಮ್ಮ ಕೃಷಿ ಜಮೀನಿಗೆ ಒಯ್ಯುವಂತಾದರೆ ಕೆರೆಯ ಪುನರುಜ್ಜೀವನ ಕಾರ್ಯಕ್ರಮ ಪ್ರಾರಂಭವಾದಂತೆ.




TATA HITACHI
110




BISMILLAH
TATA HITACHI
SWARAJ 735 XT

ಯೋಜನೆಯ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಂಸ್ಥೆಯು ಗ್ರಾಮದಲ್ಲಿ ಲಭ್ಯವಿರುವ ಕೆರೆಗಳು, ಹೂಳೆತ್ತಬೇಕಾದ ಕೆರೆಯ ಸ್ಥಳ, ವಿವರಗಳು, ಊರಿನ ಜನಸಂಖ್ಯೆ ಮತ್ತು ರೈತರ ಜಮೀನಿನ ವಿವರ, ಅನುಸರಿಸುತ್ತಿರುವ ಕೃಷಿ ಪದ್ಧತಿ, ಬೆಳೆಗಳ ವಿಧ, ಮೊದಲಾದ ಪ್ರಾಥಮಿಕ ಮಾಹಿತಿಗಳನ್ನು ಸಂಪೂರ್ಣವಾಗಿ ಕಲೆಹಾಕುತ್ತದೆ. ಕೆರೆಯ ಹೂಳೆತ್ತುವ ಕಾರ್ಯ ಪ್ರಾರಂಭವಾದಾಗಿನಿಂದ ಹಿಡಿದು ಕೊನೆಗೊಳ್ಳುವವರೆಗೆ ಸಂಸ್ಥೆ ಗ್ರಾಮದ ರೈತರ ಜೊತೆಗೆ ನಿರಂತರ ಸಂಪರ್ಕದಲ್ಲಿರುತ್ತದೆ. ಕೆರೆಯಿಂದ ಹೊರ ತೆಗೆದ ಹೂಳಿನ ಪ್ರಮಾಣ ಮತ್ತು ರೈತರು ತಮ್ಮ ಖರ್ಚಿನಲ್ಲಿ ಒಯ್ದ ಹೂಳಿನ ಪ್ರಮಾಣ ಇದೆಲ್ಲದರ ಲೆಕ್ಕವನ್ನು ಸಂಸ್ಥೆ ಕರಾರುವಕ್ಕಾಗಿ ಕಾಯ್ದುಕೊಳ್ಳುವುದಲ್ಲದೇ, ಕೆರೆಯನ್ನು ಸಂಪೂರ್ಣವಾಗಿ ಹೂಳೆತ್ತಿದ ನಂತರದಲ್ಲಿ ಇಂಜಿನಿಯರ್ ಸರ್ವೆಯನ್ನು ಸಹ ಕೈಗೊಳ್ಳುತ್ತದೆ. ಕೆರೆಯಲ್ಲಿ ಶೇಖರವಾಗಿರುವ ಹೂಳನ್ನು ಮಾತ್ರ ತೆಗೆದು 'ಮದರ್ ಅರ್ಥ್'ಗೆ ಹಾನಿಯಾಗದಂತೆ ಸಂಸ್ಥೆಯು ತಾಂತ್ರಿಕ ವಿಷಯ ಪರಿಣಿತರೊಡನೆ ಸಮಾಲೋಚನೆ ನಡೆಸಿಯೇ ಮುಂದಿನ ಹೆಜ್ಜೆಯನ್ನಿಡುತ್ತದೆ. ಕೆರೆಯ ಇನ್ನಿತರ ಕೆಲಸಗಳಾದ ಕೋಡಿ ಮತ್ತು ತೂಬಿನ ದುರಸ್ತಿ ಮೊದಲಾದ ಕೆಲಸಗಳನ್ನು ಸಂಸ್ಥೆಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಗ್ರಾಮದ ಜನರನ್ನು ಸಂಘಟಿತರನ್ನಾಗಿ ಮಾಡಿ ಗ್ರಾಮ ಪಂಚಾಯತ್ ಮೂಲಕ ಅನುಷ್ಠಾನಗೊಳಿಸುತ್ತದೆ.

ಕೆರೆಯನ್ನು ಒಮ್ಮೆ ಹೂಳೆತ್ತಿದ ನಂತರ ಅದರ ಸುಸ್ಥಿರತೆಯನ್ನು ಮತ್ತು ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಸಂಸ್ಥೆಯು ಪ್ರತಿ ಕೆರೆಗೆ ಸಂಬಂಧಿಸಿದಂತೆ ಗ್ರಾಮ ಮಟ್ಟದಲ್ಲಿ 'ಕೆರೆ ಅಭಿವೃದ್ಧಿ ಸಮಿತಿ'ಗಳನ್ನು ಹುಟ್ಟುಹಾಕಿದೆ. ಕೆರೆ ಸಮಿತಿಯು ಸ್ಥಳೀಯ ಕೆರೆಗೆ ಸಂಬಂಧಿಸಿದ ಅಭಿವೃದ್ಧಿ ಚಟುವಟಿಕೆಗಳ ಮೇಲುಸ್ತುವಾರಿ ವಹಿಸಿ ಕೆರೆಯ ಆಗು ಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಕೆರೆ ಅಭಿವೃದ್ಧಿಯ ನಂತರದಲ್ಲಿ ಸಂಸ್ಥೆಯು ರೈತರಿಗೆ ಕೆರೆಯ ಪುನರುಜ್ಜೀವನದಿಂದಾದ ಅನುಕೂಲಗಳ ಕುರಿತಾಗಿಯೂ ಸಹ ಅಧ್ಯಯನ ನಡೆಸುತ್ತದೆ. ಉದಾಹರಣೆಗೆ ಕೆರೆ ಅಭಿವೃದ್ಧಿಯಿಂದ ರೈತರಿಗೆ ಕೃಷಿ ಜಮೀನಿನಲ್ಲಿ ಉಂಟಾದ ಬದಲಾವಣೆಗಳು, ಬೆಳೆ ಮಾರ್ಪಾಡು, ಬೆಳೆಯ ಇಳುವರಿಯ ಪ್ರಮಾಣದಲ್ಲಿ ಆದ ಏರಿಕೆ, ಜಮೀನಿನಲ್ಲಿ ತೇವಾಂಶದ ಪ್ರಮಾಣ, ಪ್ರಸಕ್ತ ವರ್ಷದಲ್ಲಿ ಕೆರೆಯಲ್ಲಿನ ನೀರಿನ ಸಂಗ್ರಹಣೆಯ ಏರಿಕೆಯ ಪ್ರಮಾಣ, ಸಮುದಾಯದ ಮಟ್ಟದಲ್ಲಿ ಪ್ರಾರಂಭವಾದ ಪಶುಸಂಗೋಪನೆಯ ಪ್ರಮಾಣ ಮತ್ತು ಗ್ರಾಮದಲ್ಲಿ ಕೆರೆ ಅಭಿವೃದ್ಧಿಯಿಂದ ಕೃಷಿ ಜಮೀನಿನ ಏರಿಕೆಯ ಪ್ರಮಾಣಗಳನ್ನು ಕಲೆಹಾಕಿ ವರದಿ ತಯಾರಿಸುತ್ತದೆ.

ಕೆರೆ ಅಭಿವೃದ್ಧಿಯ ನಂತರದಲ್ಲಿ ಸಂಸ್ಥೆಯು ರೈತರಿಗೆ ಕೆರೆಯ ಪುನರುಜ್ಜೀವನದಿಂದಾದ ಅನುಕೂಲಗಳ ಕುರಿತಾಗಿಯೂ ಅಧ್ಯಯನ ನಡೆಸುತ್ತದೆ. ಉದಾಹರಣೆಗೆ ಕೆರೆ ಅಭಿವೃದ್ಧಿಯಿಂದ ರೈತರಿಗೆ ಕೃಷಿ ಜಮೀನಿನಲ್ಲಿ ಉಂಟಾದ ಬದಲಾವಣೆಗಳು, ಬೆಳೆ ಮಾರ್ಪಾಡು, ಬೆಳೆಯ ಇಳುವರಿಯ ಪ್ರಮಾಣದಲ್ಲಿ ಆದ ಏರಿಕೆ, ಜಮೀನಿನಲ್ಲಿ ತೇವಾಂಶದ ಪ್ರಮಾಣ, ಪ್ರಸಕ್ತ ವರ್ಷದಲ್ಲಿ ಕೆರೆಯಲ್ಲಿನ ನೀರಿನ ಸಂಗ್ರಹಣೆಯ ಏರಿಕೆಯ ಪ್ರಮಾಣ, ಸಮುದಾಯದ ಮಟ್ಟದಲ್ಲಿ ಪ್ರಾರಂಭವಾದ ಪಶುಸಂಗೋಪನೆಯ ಪ್ರಮಾಣ ಮತ್ತು ಗ್ರಾಮದಲ್ಲಿ ಕೆರೆ ಅಭಿವೃದ್ಧಿಯಿಂದ ಕೃಷಿ ಜಮೀನಿನ ಏರಿಕೆಯ ಪ್ರಮಾಣಗಳನ್ನು ಕಲೆಹಾಕಿ ವರದಿ ತಯಾರಿಸುತ್ತದೆ.

ಕೆರೆಯ ಪುನರುಜ್ಜೀವನದಿಂದ ಕಡು ಬೇಸಿಗೆಯಲ್ಲಿ ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ನೀರಿನ ದಾಹ ಇಂಗುತ್ತಿದೆ. ಕೆರೆಯಲ್ಲಿನ ಹೂಳು ರೈತರ ಜಮೀನುಗಳಿಗೆ ಸಾವಯವ ಗೊಬ್ಬರವಾಗಿ ಮಾರ್ಪಟ್ಟು ಮುಂದಿನ 3-4 ವರ್ಷಗಳ ಕಾಲ ರೈತರಿಗೆ ಹೊರಗಡೆಯ ರಸಗೊಬ್ಬರಗಳಿಗೆ ಅವಲಂಬಿತವಾಗುವುದನ್ನು ತಪ್ಪಿಸಿದೆ. ಕೆರೆಯ ಆಳ ಹೆಚ್ಚಾಗಿದ್ದರಿಂದ ನೀರಿನ ಶೇಖರಣೆ ಹೆಚ್ಚಾಗಿ ಭೂಮಿಗೆ ನೀರಿಂಗುವ ಪ್ರಮಾಣ ಮತ್ತು ಕೆರೆಯ ಅಚ್ಚುಕಟ್ಟಿನ ಪ್ರದೇಶಗಳ ಜಮೀನಿನಲ್ಲಿ ನೀರಿನ ಸಾಂದ್ರತೆ ಹೆಚ್ಚಾಗಿದೆ. ಕೇವಲ ಏಕ ಬೆಳೆಗೆ ಸೀಮಿತವಾಗಿದ್ದ ರೈತ ಸಮುದಾಯ ಈಗ ಹಿಂಗಾರು ಬೆಳೆ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ, ಜಾನುವಾರು ನಿರ್ವಹಣೆ ಪಶುಸಂಗೋಪನೆಯಂತಹ ಪರ್ಯಾಯ ಜೀವನೋಪಾಯ ನಿರ್ವಹಣೆಯಿಂದ ರೈತರಿಗೆ ಪರ್ಯಾಯ ವಾರ್ಷಿಕ ಆದಾಯದ ಪ್ರಮಾಣ ಅಧಿಕವಾಗಿದೆ. ಊರಿನ ಮಹಿಳೆಯರು ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ 3-4 ಕಿಲೋಮೀಟರ್ ಗಳ ಓಡಾಟ ತಪ್ಪಿದಂತಾಗಿದೆ. ವರ್ಷದಿಂದ ವರ್ಷಕ್ಕೆ ಅಂತರ್ಜಲ ಪ್ರಮಾಣ ಅಧಿಕವಾಗಿದೆ. ಕೆರೆಯ ಆಸುಪಾಸು 2-3 ವರ್ಷದಿಂದ ಬರಿದಾಗಿದ್ದ ಬೋರ್ ವೆಲ್ ಗಳಲ್ಲಿ ಮತ್ತೆ ನೀರಿನ ಲಭ್ಯತೆ ಕಂಡುಬಂದಿದೆ.

ಒಂದು ಗ್ರಾಮದ ಕೆರೆಯ ಅಭಿವೃದ್ಧಿಯಿಂದ ಸಮಾಜದ ವಿವಿಧ ಸ್ತರಗಳ ಸಮುದಾಯಗಳ ಪಾಲ್ಗೊಳ್ಳುವಿಕೆ, ಒಡಂಬಡಿಕೆ ಸಾಧ್ಯವಾಗುತ್ತದೆ, ಗ್ರಾಮದಲ್ಲಿ ಒಗ್ಗಟ್ಟಿನ ಜೊತೆಗೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಏರುಪೇರುಗಳ ಸಮತೋಲನ ಸಾಧ್ಯವಾಗುತ್ತದೆ. ಮುಖ್ಯವಾಗಿ ಲಭ್ಯವಿರುವ ಸ್ಥಳೀಯ ಸಂಪನ್ಮೂಲದ ಸಮರ್ಪಕ ಬಳಕೆಯಿಂದ ರೈತಾಬಿ ಸಮುದಾಯದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಿದೆ.

ಒಂದು ದೇಶದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಮೊದಲು ಅದು ಗ್ರಾಮಗಳ ಅಭಿವೃದ್ಧಿಯಿಂದ ಪ್ರಾರಂಭವಾಗಬೇಕು ಎನ್ನುವ ಮುಖ್ಯ ಉದ್ದೇಶದೊಂದಿಗೆ ಮನುವಿಕಾಸ ಸಂಸ್ಥೆ ಜನಸಾಮಾನ್ಯರಲ್ಲಿ ಜಲ ಜಾಗೃತಿಯನ್ನು ಪಸರಿಸಲು ಅವಿರತವಾಗಿ ಶ್ರಮಿಸುತ್ತದೆ.

ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯಿಂದ ಹೇಗೆ ಸಮುದಾಯಗಳ ಸಮಸ್ಯೆಯನ್ನು ಬಗೆಹರಿಕೊಳ್ಳಬೇಕು, ಮುಂದಿನ ಪೀಳಿಗೆಗೆ ಜಲ ದಾಹವನ್ನು ನೀಗಿಸಲು ಬರಿದಾಗುವ ಜೀವಜಲವನ್ನು ಕಾಪಾಡಲು ಇಂದಿನ ಸಮುದಾಯಗಳ ಪಾತ್ರ ಏನೆಂದು ತಿಳಿಸಿಕೊಡುವ ನಿಟ್ಟಿನಲ್ಲಿ ಸಂಸ್ಥೆ ಮಾಡುತ್ತಿರುವ ಕೆಲಸ ಶ್ಲಾಘನೀಯವಾಗಿದ್ದು, ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಅನುಕರಣೀಯ ಎಂಬುದರಲ್ಲಿ ಸಂಶಯವಿಲ್ಲ.

# Carbon-Neutral Villages and Nature-Based Solutions

## Initiatives and Implementation Framework of MANUVIKASA


### Abstract

Carbon neutrality at the village level is an achievable and meaningful response to climate change, ecosystem degradation, and rural livelihood challenges. This seminar paper presents a practical framework for developing "carbon-neutral villages" through Nature-Based Solutions (NBS), based on MANUVIKASA's field experience in rural Karnataka. The approach integrates water conservation, watershed restoration, lake rejuvenation, farm ponds, agroforestry, sustainable agriculture, community forestry, biodiversity restoration, and clean energy into a unified village-level climate strategy that reduces emissions, enhances carbon sequestration, builds resilience, and improves livelihoods.

The paper outlines a conceptual model for carbon-neutral villages and highlights the suitability of NBS for semi-humid and dryland regions. It proposes a step-by-step implementation pathway including baseline assessment, participatory planning, intervention bundling, institution building, convergence with government schemes, and monitoring–reporting–verification (MRV). It also emphasizes practical carbon accounting using simplified inventories, proxy indicators, and community-owned "MRV-lite" systems that enable credible aggregation for climate finance.

The paper concludes that carbon neutrality should be viewed not just as a carbon balance goal, but as a pathway for holistic rural development—enhancing water security, soil health, biodiversity, and strengthening community institutions for long-term climate resilience.


### 1. Introduction

Rural villages are at the frontline of climate change, facing erratic rainfall, declining groundwater, soil degradation, crop stress, and rising human–wildlife conflict. At the same time, they offer strong potential for climate solutions due to their control over land, water, forests, and community systems. The concept of 'carbon-neutral villages' is therefore valuable, as it enables localized, participatory, and integrated climate action across agriculture, water, energy, and livelihoods.

However, carbon neutrality is often narrowly viewed as an energy-focused goal. In rural contexts, a more effective approach is regenerative development through Nature-Based Solutions (NbS). These solutions deliver multiple benefits, including carbon sequestration, water recharge, biodiversity restoration, reduced erosion, and improved farm productivity and incomes.

This article emphasizes an NbS-led pathway to carbon-neutral villages, drawing from MANUVIKASA's experience in Karnataka. Its work in lake rejuvenation, farm ponds, SHG empowerment, farmer collectivization, and natural resource management demonstrates how integrated village-level interventions can form a practical and scalable carbon-neutral model.

## 2. Carbon-Neutral Villages: A Practical Rural Development Approach

A carbon-neutral village can be understood as a village that works systematically to reduce greenhouse gas emissions, increase carbon sequestration, and improve resilience through better management of land, water, trees, energy, and livelihoods. In rural areas, carbon neutrality is not only about energy transition; it is also about restoring ecological assets and strengthening community institutions.

For MANUVIKASA, village carbon neutrality is best approached as a **development pathway** rather than a narrow carbon accounting exercise. The focus is on reducing avoidable emissions, increasing tree and soil carbon, restoring commons, strengthening water security, and improving local livelihoods. Village-scale action is useful because it creates community ownership, allows integrated planning, and makes monitoring more feasible.

## 3. Why Nature-Based Solutions Matter in Rural Karnataka

In many parts of Karnataka, villages face a repeating cycle of erratic rainfall, rapid runoff, groundwater decline, soil degradation, and livelihood stress. Nature-Based Solutions (NbS) directly address these problems by improving the health and productivity of local ecosystems.

For rural villages, NbS include:

- Watershed treatment and soil conservation,
- Lake and wetland restoration,
- Farm ponds and groundwater recharge,
- Agroforestry and tree-based farming,
- Restoration of commons and Betta lands,
- Sustainable agriculture and soil organic carbon enhancement,
- Biodiversity restoration linked to livelihoods.

These approaches are especially relevant because they generate multiple benefits at once: carbon sequestration, water storage, drought resilience, reduced erosion, fodder and biomass availability, biodiversity recovery, and higher farm productivity.

## 4. MANUVIKASA's Field Experience and Carbon-Neutral Village Entry Points

MANUVIKASA has more than two decades of experience in rural Karnataka in linking natural resource conservation with livelihood development. Its work provides a strong practical foundation for a carbon-neutral village approach.

### 4.1 Water conservation and ecosystem restoration

Water is the backbone of MANUVIKASA's climate and livelihood strategy. The organisation has already:

- Rejuvenated 337 lakes,
- Constructed 3,813 farm ponds,
- Developed 15,067 soak pits,

supported protective irrigation over approximately 25,000 hectares.

These interventions improve groundwater recharge, increase water storage, reduce seasonal crop stress, and create conditions for higher biomass growth, agroforestry survival, and soil carbon improvement.





#### 4.2 Clean energy and reduced biomass pressure

MANUVIKASA has also promoted clean household energy measures, including:

- 150 smokeless chulhas,
- 250 improved cooking stoves,
- Estimated firewood savings of about 7,800 kg per day.

This not only reduces pressure on biomass resources and women's drudgery, but also creates a measurable emissions reduction opportunity.





#### 4.3 Trees, forest conservation, and commons regeneration

On the carbon sequestration side, MANUVIKASA's work includes:

- Conservation support across about 30,000 acres of community forest,
- Plantation of 44,000 native tree saplings,
- Promotion of assisted natural regeneration and biodiversity restoration in commons and Betta lands.

These efforts contribute to above-ground biomass growth, avoided degradation, habitat improvement, and NTFP-based livelihood strengthening.

### 4.4 Sustainable agriculture and soil carbon

MANUVIKASA's field approach also supports:

- Integrated farming systems
- Composting and vermicomposting
- Mulching and better residue management
- Reduced chemical dependency
- Water-efficient cultivation practices such as SRI and diversified cropping

These practices improve soil organic matter, reduce burning and input-related emissions, and strengthen farm resilience.



### 4.5 Institutions and women-led action

A major strength of MANUVIKASA is its emphasis on community institutions, especially SHGs, farmer groups, user groups, and local committees. These institutions are essential for:

- Equitable management of water and commons,
- Plantation protection,
- Adoption of household and farm-level low-carbon practices,
- Savings, credit, and livelihood diversification,
- Local monitoring and maintenance of assets.

This social foundation makes carbon-neutral village planning much more credible and sustainable.

## 5. MANUVIKASA's Carbon-Neutral Village Framework

Based on its field experience, MANUVIKASA can develop carbon-neutral villages through an integrated village climate plan built around the following pillars:

### 5.1 Water security as the core

The first pillar is water system restoration:

- Lake rejuvenation
- Farm pond construction
- Watershed treatment
- Recharge structures
- Wetland protection
- Reuse of nutrient-rich silt in farmland

These measures improve water storage, stabilize agriculture, and support tree and biomass growth.

### 5.2 Sustainable agriculture and soil restoration

The second pillar is farm-level climate resilience through:

- Composting and vermicomposting
- Mulching and no residue burning
- Mixed cropping and crop rotation
- Integrated crop–livestock systems
- Improved soil fertility management

This reduces emissions and enhances soil carbon over time.









### 5.3 Agroforestry and tree-based livelihoods

The third pillar is increasing tree cover through:

- Bund plantations
- Boundary planting
- Fruit tree systems
- Native species regeneration
- NTFP-based plantation models

This improves carbon sequestration while also supporting income diversification.

### 5.4 Commons and Betta land restoration

The fourth pillar is restoring degraded commons through:

- Community protection systems
- Assisted natural regeneration
- Native species plantation
- Regulated grazing
- Fodder and biomass management

This contributes to both biodiversity conservation and avoided emissions from degradation.

### 5.5 Household energy and circular practices

The fifth pillar is reducing household-level emissions through:

- Improved cookstoves
- Biogas where feasible
- Solar lighting
- Efficient irrigation
- Composting and waste segregation
- Reduction of burning practices

### 5.6 Community governance and maintenance

The sixth pillar is strong village institutions:

- Village Climate Committees
- SHG-led implementation
- Water user groups
- Commons committees
- Community resource persons
- Local maintenance funds and by-laws

This ensures long-term sustainability.

## 6. Practical Carbon Accounting: MANUVIKASA's Early Climate Impact

Carbon accounting at village level should remain practical and conservative. Instead of relying only on expensive scientific measurements, MANUVIKASA can use a simplified system that combines activity data, field verification, proxy indicators, and periodic technical review.

Based on existing interventions, MANUVIKASA already demonstrates significant early climate mitigation potential.

### 6.1 Clean cooking impact

With estimated savings of 7,800 kg of firewood per day, annual savings are around 2,847 tonnes of wood. Using conservative assumptions, this gives an estimated mitigation effect of about:

- 5,125 $tCO_2e$ per year

### 6.2 Tree biomass and community forest protection

Using conservative assumptions for surviving plantations and modest biomass growth, along with minimal credit for avoided degradation in protected community forests, the annual mitigation potential is estimated at:

- 8,400 $tCO_2e$ per year

### 6.3 Soil carbon and sustainable agriculture

From composting, integrated farming, reduced burning, improved crop management, and sustainable agricultural practices, the annual potential is estimated at:

- 6,800 $tCO_2e$ per year

### 6.4 Avoided emissions

From reduced residue burning, partial chemical input reduction, and improved practices, a conservative estimate is:

- 1,700 $tCO_2e$ per year

### 6.5 Total early annual carbon impact

Taken together, MANUVIKASA's ongoing interventions generate an estimated early-stage mitigation potential of approximately:

- 22,000 $tCO_2e$ per year

This is broadly equivalent to removing around:

- 4,800 petrol cars from the road annually

This estimate is not a certified carbon credit figure, but it is a useful and conservative early-stage climate impact estimate for seminars, concept notes, and donor communication.

### 7. Monitoring and MRV: A Practical Community-Based System

To make the carbon-neutral village model credible, MANUVIKASA can adopt a light but structured MRV system.

**Key indicators can include:**

- Number and storage of farm ponds
- Lake restoration area and water-holding increase
- Groundwater depth changes
- Irrigated area and cropping intensity
- Trees planted and survival rate
- Commons area regenerated
- Compost units and quantity produced
- Reduction in residue burning
- Improved stove and clean energy adoption
- Diesel use reduction
- Income improvements
- Women's participation in decision-making

**Data roles:**

- CRPs and village institutions collect field data
- Technical teams validate engineering and ecological outcomes
- Annual village climate report cards consolidate results
- Cluster-level dashboards aggregate village performance

This “MRV-lite” approach is suitable for village ownership while also creating a pathway for future program-level verification.

### 8. Implementation Roadmap for MANUVIKASA

A carbon-neutral village program can be implemented in phases.

**Year 1**

- Baseline assessment
- Village climate planning
- Committee formation
- Pilot water and soil works
- Initial plantation and commons protection
- Start of MRV and awareness activities

**Year 2**

- Expansion of watershed and pond works
- Lake rejuvenation and silt reuse
- Agroforestry scaling
- SHG-led livelihood strengthening
- Household clean energy adoption
- Maintenance fund creation

**Year 3**

- Consolidation of tree survival and commons regeneration
- Deeper soil carbon practices
- Reduced chemical use
- Climate reporting at village level
- Stronger convergence with government schemes

**Beyond Year 3**

- Scaling through village clusters
- Aggregation of climate outcomes
- Stronger technical MRV
- Preparation for climate finance readiness where feasible

## 9. Why This Model Matters

The value of MANUVIKASA's approach is that it combines climate mitigation, adaptation, and livelihood improvement in one village-level framework. The benefits go beyond carbon.
The model improves:

- Water security
- Farm productivity
- Soil health
- Biomass and tree cover
- Biodiversity
- Women's participation
- Resilience against drought and climate shocks

In ecologically sensitive areas, it can also contribute to reduced pressure on forests and better management of human–wildlife conflict through improved water and biomass availability.

## 10. Conclusion

For rural Karnataka, carbon-neutral villages should not be seen only as carbon accounting units, but as community-led climate-resilient development systems. MANUVIKASA's existing work already demonstrates the building blocks of such a model: lake rejuvenation, farm ponds, soak pits, clean cooking, forest conservation, agroforestry, sustainable agriculture, and strong women-led institutions.

With 337 lakes rejuvenated, 3,813 farm ponds constructed, 15,067 soak pits developed, 44,000 native saplings planted, 30,000 acres of community forest supported, and measurable firewood savings through improved cooking solutions, MANUVIKASA has already created a significant early climate mitigation and resilience impact.

A realistic next step is to develop carbon-neutral village clusters where these interventions are systematically bundled, monitored, and scaled. This would allow MANUVIKASA to position itself not only as a rural development organization, but also as a practical leader in village-scale climate action rooted in Nature-Based Solutions.



**A picture from Women Convention organised by MANUVIKASA**

# MANUVIKASA

***Administrative Office: "Shri mata" Building Vijaynagar Taluk: Sirsi, Uttara Kannada, Karnataka, India - 581401***

***Registered Office: At: Karjagi, PO: Balur, Taluk: Siddapur, Uttara Kannada, Karnataka, India - 581340***

manuvikasa@gmail.com www.manuvikasa.org www.facebook.com/manuvikasa/